

# ವಾಕ್ ಸಮರ

ಇ–ಪೇಪರ್
ಕನ್ನಡ ದಿನ ಪತ್ರಿಕೆ
Kannada Daily

ಸಂಪಾದಕರು : ನಾರಾಯಣರೆಡ್ಡಿ
Editor : NARAYANAREDDY
ಮೊ.ನಂ. 9845080478
Email: vaksamaranewspaper@gmail.com

ಸಂಪುಟ : 02 ಸಂಚಿಕೆ : 193 MAG(3)NPP/84/2020-21 RNI NO : KARKAN/2010/32845 19–02–2025 ಬುಧವಾರ ಪುಟ : 4 ಬೆಲೆ : ರೂ. 2–00


ರಾಜ್ಯದಲ್ಲಿ ವಿದ್ಯುತ್ ಕೊರತೆ ಇಲ್ಲ

## ಕೃಷಿಗೆ 7 ತಾಸು, ಗೃಹ ಮತ್ತು ಕೈಗಾರಿಕೆಗೆ ನಿರಂತರ ವಿದ್ಯುತ್ ಪೂರೈಕೆಗೆ ಸರ್ಕಾರ ಬದ್ಧ, ಸೋಲಾರ ವಿದ್ಯುತ್ ಉತ್ಪಾದನೆಗೆ ಒತ್ತು; ಇಂಧನ ಸಚಿವರಾದ ಕೆ.ಜೆ.ಜಾರ್ಜ್



**ವಾಕ್‌ಸಮರ ಸುದ್ದಿ**
**ವರದಿ : ಆಶಾಮುರಳಿ**

ದಾವಣಗೆರೆ: ಫೆ 18 : ಕೃಷಿಗೆ 7 ತಾಸು ತ್ರಿಫೇಜ್ ವಿದ್ಯುತ್ ಮತ್ತು ಗೃಹ ಬಳಕೆ ಹಾಗೂ ಕೈಗಾರಿಕೆಗೆ ದಿನದ 24 ಗಂಟೆಗಳೂ ವಿದ್ಯುತ್ ಪೂರೈಕೆ ಮಾಡುವುದು ಸರ್ಕಾರದ ನೀತಿಯಾಗಿದ್ದು ಇದಕ್ಕೆ ಬದ್ದವಾಗಿ ವಿದ್ಯುತ್ ಪೂರೈಸಲಾಗುತ್ತಿದೆ ಎಂದು ಇಂಧನ ಸಚಿವರಾದ ಕೆ.ಜೆ.ಜಾರ್ಜ್ ತಿಳಿಸಿದರು.

ಅವರು ಮಂಗಳವಾರ ಜಿಲ್ಲಾ ಪಂಚಾಯುತ್ ಸಭಾಂಗಣದಲ್ಲಿ ಇಂಧನ ಇಲಾಖೆ ಅಧಿಕಾರಿಗಳು ಹಾಗೂ ಶಾಸಕರೊಂದಿಗೆ ನಡೆಸಿದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದರು. ರಾಜ್ಯದಲ್ಲಿ ವಿದ್ಯುತ್ ಕೊರತೆ ಇಲ್ಲ, ಆದರೆ ಕೆಲವೊಂದು ತಾಂತ್ರಿಕ ಸಮಸ್ಯೆಯಿಂದ ಕೆಲವೇ ಸ್ಥಳಗಳಲ್ಲಿ ಮಾತ್ರ ನಿರ್ವಹಣೆಗಾಗಿ ಕಡಿತ ಮಾಡಲಾಗುತ್ತದೆ. ಆದರೆ ಸರ್ಕಾರದ ಬದ್ದತೆಯಂತೆ ಕೃಷಿಗೆ 7 ಗಂಟೆ ವಿದ್ಯುತ್ ಪೂರೈಕೆ ಮಾಡಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ, ಆದರೆ ಲೋಡ್‌ಶೆಡ್ಡಿಂಗ್ ಜಾರಿಯಲ್ಲಿರುವುದಿಲ್ಲ ಎಂದರು.

ರಾಜ್ಯದಲ್ಲಿ ಪ್ರತಿನಿತ್ಯ 18500 ಮೆಗಾವ್ಯಾಟ್ ಬೇಡಿಕೆ ಇದ್ದು ಬೇಸಿಗೆ ಆರಂಭವಾಗಿರುವುದರಿಂದ ಸರಾಸರಿಗಿಂತ ಶೇ 10 ರಷ್ಟು ವಿದ್ಯುತ್ ಬೇಡಿಕೆ ಹೆಚ್ಚಿದೆ. ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆ ಹೆಚ್ಚುವುದರಿಂದ ಪಂಜಾಬ್ ಮತ್ತು ಉತ್ತರ ಪ್ರದೇಶದಲ್ಲಿ ವಿದ್ಯುತ್ ಬ್ಯಾಂಕಿಂಗ್ ಮಾಡಿಕೊಂಡು ಜೂನ್‌ನಿಂದ ಆ ರಾಜ್ಯಗಳಿಗೆ ಕರ್ನಾಟಕದಿಂದ ವಿದ್ಯುತ್ ನೀಡಿ ಬೇಸಿಗೆಯಲ್ಲಿ ಅಲ್ಲಿಂದ ಗ್ರಿಡ್ ಮೂಲಕ ವಿದ್ಯುತ್ ಪಡೆಯಲು ಉದ್ದೇಶಿಸಲಾಗಿದೆ. ಗುಣಮಟ್ಟದ ವೋಲ್ಟೇಜ್‌ಗಾಗಿ ಅಗತ್ಯವಿರುವ ಕಡೆ ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ ಎಂದರು.

3 ಸಾವಿರ ಮೆ.ವ್ಯಾ ವಿದ್ಯುತ್ ಉತ್ಪಾದನೆ; ಕುಸುಮ್–ಸಿ ಯೋಜನೆಯ ಮೂಲಕ ಮುಂದಿನ ಒಂದೂವರೆ ವರ್ಷದಲ್ಲಿ ಸೋಲಾರ್‌ನಿಂದ 3 ಸಾವಿರ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯ ಗುರಿ ಹೊಂದಲಾಗಿದೆ. ಈಗಾಗಲೇ ಕುಸುಮ್ ಯೋಜನೆಯಡಿ ಸಂಸ್ಥೆಗಳಿಗೆ ಕಾರ್ಯಾದೇಶ ನೀಡಿದ್ದು ಸೋಲಾರ್ ಪ್ಯಾನಲ್ ಅಳವಡಿಕೆ, ವಿದ್ಯುತ್ ಉತ್ಪಾದನೆ ಹಂತ, ಭೂಮಿ ಸಮತಟ್ಟು ಮಾಡುವ ಕೆಲಸ ಪ್ರಗತಿಯಲ್ಲಿದ್ದು ಬರುವ ಏಪ್ರಿಲ್‌ನಲ್ಲಿ 300 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಿ ಗ್ರಿಡ್‌ಗೆ ಕಳುಹಿಸಲು ಕಾರ್ಯಕ್ರಮ ರೂಪಿಸಲಾಗಿದೆ ಎಂದರು.

3000 ಪವರ್ ಮ್ಯಾನ್ ನೇಮಕ; ಇಂಧನ ಇಲಾಖೆಯಿಂದ ಈಗಾಗಲೇ ಗುಣಮಟ್ಟದ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ಇನ್ನಷ್ಟು ಗುಣಮಟ್ಟವನ್ನು ಕಾಪಾಡಿಕೊಳ್ಳುವ ಉದ್ದೇಶದಿಂದ ಇಂಧನ ಇಲಾಖೆಗೆ ಅಗತ್ಯವಿರುವ 3000 ಪವರ್ ಮ್ಯಾನ್ ಹುದ್ದೆಗಳ ಭರ್ತಿ ಪ್ರಕ್ರಿಯೆ ನಡೆಯುತ್ತಿದ್ದು 3 ಲಕ್ಷ ಅರ್ಜಿಗಳು ಸ್ವೀಕೃತವಾಗಿವೆ. ಈಗಾಗಲೇ ಅರ್ಜಿಗಳ ಪರಿಶೀಲನಾ ಹಂತ ಮುಗಿದಿದ್ದು 1 ಲಕ್ಷ ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ. ಇದರಲ್ಲಿ 1;5 ರನ್ವಯ ದೈಹಿಕ ಪರೀಕ್ಷೆಗೆ ಆಯ್ಕೆ ಮಾಡಿ ಅಂತಿಮವಾಗಿ ಅತ್ಯಂತ ಪಾರದರ್ಶಕವಾಗಿ ಮೀಸಲಾತಿ ಹಾಗೂ ಅಂಕಗಳ ಆಧಾರದ ಮೇಲೆ ಏಪ್ರಿಲ್ ಒಳಗಾಗಿ ನೇಮಕಾತಿ ನಡೆಯಲಿದೆ. ಆದರೆ ಯಾವುದೇ ಮಧ್ಯವರ್ತಿಗಳ ಬಳಿ ಹಣಕೊಟ್ಟು ಕಳೆದುಕೊಳ್ಳಬೇಡಿ, ಯಾರಾದರೂ ಆಮಿಷವೊಡ್ಡಿದಲ್ಲಿ ಇಲಾಖೆ ಗಮನಕ್ಕೆ ತರಬೇಕೆಂದು ತಿಳಿಸಿದರು.

ಎಸ್ಕಾಂಗಳು ನಷ್ಟದಲ್ಲಿಲ್ಲ; ಇಂಧನ ಇಲಾಖೆಯಲ್ಲಿನ ಯಾವುದೇ ಎಸ್ಕಾಂಗಳು ನಷ್ಟದಲ್ಲಿಲ್ಲ, ಆದರೆ ಸರ್ಕಾರದಿಂದ ಸಾಕಷ್ಟು ಹಣ ಬರಬೇಕಾಗಿದೆ. ಸ್ಥಳೀಯ ಸಂಸ್ಥೆಗಳು ಸೇರಿದಂತೆ ಪಂಚಾಯುತ್ ರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಕಂಪನಿಗಳಿಗೆ ಬರಬೇಕಾದ ಹಣ ಬಾಕಿ ಇದೆ. ಗ್ರಾಮ ಪಂಚಾಯಿತಿಗಳು ಸ್ವಂತವಾಗಿ ವಿದ್ಯುತ್ ಉತ್ಪಾದನೆ ಮಾಡಿ ಕೊಳ್ಳುವ ಯೋಜನೆ ಇದ್ದು ದಾವಣಗೆರೆ ಜಿಲ್ಲೆಯಲ್ಲಿ

–2ನೇ ಪುಟಕ್ಕೆ......

ರಾಜ್ಯದಲ್ಲಿ ಅನಧಿಕೃತ ಬಡಾವಣೆಗಳಿಗೆ ಇನ್ನುಂದೆ ಅವಕಾಶ ಇಲ್ಲ!

## ಬಿ ಖಾತಾ ಮಾಡಿಕೊಳ್ಳಲು 3 ತಿಂಗಳ ಗಡುವು: ಸಿದ್ದರಾಮಯ್ಯ ಖಡಕ್ ಸೂಚನೆ



ವಾಕ್‌ಸಮರ ಸುದ್ದಿ
ವರದಿ : ಕೆ.ಪಿ. ದಿವಾಕರ್ ವಿಶ್ವಕರ್ಮ

ಬೆಂಗಳೂರು: ರಾಜ್ಯದಲ್ಲಿ ಅನಧಿಕೃತ ಬಡಾವಣೆಗಳಿಗೆ ಇನ್ಮುಂದೆ ಅವಕಾಶ ಇಲ್ಲ ಎಂದು ಸಿಎಂ ಸಿದ್ದರಾಮಯ್ಯ ಖಡಕ್ ಸೂಚನೆ ನೀಡಿದ್ದಾರೆ. ಟರ್ಮ್ ಲೈಫ್ ಇನ್ಶುರೆನ್ಸ್ ಯೋಜನೆಗಳು

ಟರ್ಮ್ ಇನ್ಶೂರೆನ್ಸ್ – ಉಚಿತ ಕೋಟ್ ಪಡೆಯಿರಿ!

ರಾಜ್ಯದ ಮಹಾನಗರಪಾಲಿಕೆ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಇ–ಖಾತಾ ನೀಡುವ ಕುರಿತು ಜಿಲ್ಲಾಧಿಕಾರಿಗಳು, ಯೋಜನಾ ನಿರ್ದೇಶಕರು, ಮಹಾನಗರ ಪಾಲಿಕೆ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಆಯುಕ್ತರು, ಪೌರಾಯುಕ್ತರು, ಮುಖ್ಯಾಧಿಕಾರಿಗಳೊಂದಿಗೆ ವಿಡಿಯೊ ಕಾನ್ಫರೆನ್ಸ್ ನಡೆಸಿದ ಸಿಎಂ ಇದೇ ಸಂದರ್ಭದಲ್ಲಿ ಈ ಸೂಚನೆ ನೀಡಿದರು.

ಅನಧಿಕೃತ ಬಡಾವಣೆಗಳು ನಗರ, ಪಟ್ಟಣ, ಪಾಲಿಕೆ ವ್ಯಾಪ್ತಿ ಮತ್ತು ಹಳ್ಳಿಗಳಲ್ಲೂ ಇವೆ. ಇವೆಲ್ಲಕ್ಕೂ ನಾವು ಅಂತ್ಯ ಹಾಡುತ್ತಿದ್ದೇವೆ.

ಇನ್ನು ಮುಂದೆ ಅನಧಿಕೃತ ಬಡಾವಣೆಗಳಿಗೆ ರಾಜ್ಯದಲ್ಲಿ ಕಿಂಚಿತ್ತೂ ಅವಕಾಶ ಇಲ್ಲ ಎಂದು ಖಡಕ್ ಆಗಿ ಸೂಚಿಸಿದರು.

ಕಾಯ್ದೆ ಮೂಲಕ ಅನಧಿಕೃತ ಬಡಾವಣೆಗಳಿಗೆ ಅಂತ್ಯ ಹಾಡಿದ್ದೇವೆ. ಅಧಿಕಾರಿಗಳು ಸ್ಪಷ್ಟವಾಗಿ ಅರ್ಥ ಮಾಡಿಕೊಂಡು ಕೆಲಸ ಮಾಡಿ ಎಂದು ಸೂಚಿಸಿದರು.

ಅನಧಿಕೃತ ಬಡಾವಣೆಗಳಿಂದ ಕಂದಾಯ ಬರುತ್ತಿಲ್ಲ, ಪರಿಣಾಮ ಜನರಿಗೆ ನಾಗರಿಕ ಸವಲತ್ತುಗಳೂ ಸಿಗುತ್ತಿಲ್ಲ, ಸ್ಥಳೀಯ ಸಂಸ್ಥೆಗಳಿಗೆ ಆದಾಯವೂ ಬಂದ್ ಆಗಿದೆ. ಇವೆಲ್ಲಾ ಅನಾನುಕೂಲಗಳಿಗೂ ಅಂತ್ಯ ಹಾಡಬೇಕಿದೆ ಎಂದು ಅಧಿಕಾರಿಗಳಿಗೆ ತಿಳಿಸಿದರು.

–2ನೇ ಪುಟಕ್ಕೆ.....

## ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ ರೂ. 1.99 ಕೋಟಿ

**ವಾಕ್‌ಸಮರ ಸುದ್ದಿ**

ದಾವಣಗೆರೆ ಬರುವ ಆರ್ಥಿಕ ವರ್ಷಕ್ಕೆ ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ ರೂ.1,99,80000 ಗಳ ಬಜೆಟ್ ನೀಡಿ ಮಹಾಪೌರರು ಹಾಗೂ ನಗರ ಗ್ರಂಥಾಲಯ ಪ್ರಾಧಿಕಾರದ ಅಧ್ಯಕ್ಷರಾದ ಕೆ. ಚಮನ್‌ಸಾಬ್ ಅನುಮೋದನೆ ನೀಡಿದ್ದಾರೆ ಎಂದು ನಗರ ಮುಖ್ಯ ಗ್ರಂಥಾಲಯಾಧಿಕಾರಿ ಪಿ.ಆರ್.ತಿಪ್ಪೇಸ್ವಾಮಿ ತಿಳಿಸಿದ್ದಾರೆ. ಮಂಗಳವಾರ (ಫೆ.18) ರಂದು ನಗರ ಕೇಂದ್ರ ಗ್ರಂಥಾಲಯ ಉಪನಿರ್ದೇಶಕರ ಕಚೇರಿಯಲ್ಲಿ ಆಯೋಜಿಸ ಲಾಗಿದ್ದ 2025–26 ನೇ ಸಾಲಿನ ಆಯವ್ಯಯ ಸಭೆಯಲ್ಲಿ ಬಜೆಟ್‌ಗೆ ಅನುಮೋದನೆ ನೀಡಲಾಯಿತು.

ದೇವರಾಜ ಅರಸ್ ಬಡಾವಣೆ ಗ್ರಂಥಾಲಯದ ವಿಸ್ತರಣೆ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ಮೂಲಕ ನಿರ್ವಹಿಸಲು ಅನುಮೋದನೆ ನೀಡಿದರು. ಬಡಾವಣೆ ಪೊಲೀಸ್ ಠಾಣೆ ಎದುರಿಗಿರುವ ಸಿಲ್ವರ್ ಜ್ಯುಬಿಲಿ ಶಾಖಾ ಗ್ರಂಥಾಲಯಕ್ಕೆ ಓದುಗರ ಅನುಕೂಲಕ್ಕೆ ಬೋರ್ ವೆಲ್ ಕೊರೆಸಲು ಅನುಮೋದನೆ ನೀಡಿದ್ದಲ್ಲದೇ ಸ್ಥಳದಲ್ಲಿಯೇ ಆಯುಕ್ತರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಸಭೆಯಲ್ಲಿ ಪರಿಷತ್ ಕಾರ್ಯದರ್ಶಿ ಶ್ರೀನಿವಾಸ ಎಸ್., ದ.ರಾ.ಮ ವಿಜ್ಞಾನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ರೂಪಶ್ರೀ, ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಗೋವಿಂದರಾಜು ಎಲ್, ರಾಜನಹಳ್ಳಿ ಸೀತಮ್ಮ ಬಾಲಕೀಯರ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಮಂಜಪ್ಪ ಎ.ಆರ್ ಹಾಗೂ ಗ್ರಂಥಾಲಯದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಜೀವಿತ ಪ್ರಮಾಣ ಪತ್ರ ಸಲ್ಲಿಕೆ

ದಾವಣಗೆರೆ: ಫೆ18 : ಕಾರ್ಮಿಕರ ಭವಿಷ್ಯ ನಿಧಿ ಸಂಘನೆಯ ಪಿಂಚಣಿ ಯೋಜನೆಯಡಿ ಶಿವಮೊಗ್ಗ ಮತ್ತು ದಾವಣಗೆರೆ ಜಿಲ್ಲೆಯ ಪಿಂಚಣಿದಾರರು ಪಿಂಚಣಿ ಪಡೆಯುತ್ತಿದ್ದು ಇದರಲ್ಲಿ 5577 ಪಿಂಚಣಿದಾರರು ಇದುವರೆಗೆ ತಮ್ಮ ಜೀವಿತ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ.

ಪಿಂಚಣಿದಾರರು ಜೀವಿತ ಪ್ರಮಾಣಪತ್ರವನ್ನು ಅಂಚೆ ಕಚೇರಿಯಲ್ಲಿ ಅಥವಾ ಬ್ಯಾಂಕ್‌ನಲ್ಲಿ ಸಲ್ಲಿಸಬಹುದು.

ಅಥವಾ ತಮ್ಮ ಆಂಡ್ರಾಯ್ಡ್ ಮೊಬೈಲ್ ಪೋನ್ ಮೂಲಕ ಫೇಸ್ ಅಂಥೆಂಟಿಕೇಶನ್ ಟೆಕ್ನಾಲಜಿಯನ್ನು ಅಳವಡಿಸಿಕೊಂಡು ಜೀವಿತ ಪ್ರಮಾಣಪತ್ರವನ್ನು ಸಲ್ಲಿಸಬಹುದೆಂದು ಕ್ಷೇತ್ರಿಯ ಭವಿಷ್ಯನಿಧಿ ಆಯುಕ್ತರು ತಿಳಿಸಿದ್ದಾರೆ.

## ಪ್ರಜಾಪ್ರಭುತ್ವದ ಕಾವಲು ಕಾಯುವವರೇ ಪತ್ರಕರ್ತರು : ಸಭಾಧ್ಯಕ್ಷ ಯು.ಟಿ ಖಾದರ್



**ಹೊಸಪೇಟೆ:** ವಿಜಯನಗರ : ಫೇಬ್ರವರಿ 14ರಂದು ಅವರು ಗೋವಾ ರಾಜ್ಯದ ಕೋಲ್ವಾದಲ್ಲಿನ ಕೋಲ್ಮಾರ್ ಬೀಚ್ ರೆಸಾರ್ಟಿನ ಸ್ಟೇಡಿಯಂನಲ್ಲಿ ನಡೆದ ಇಂಡಿಯನ್ ಜರ್ನಲೀಸ್ಟ್ ಯೂನಿಯನ್ ಇದರ ನ್ಯಾಷನಲ್ ಎಕ್ಸಿಕ್ಯೂಟಿವ್ ಕಮಿಟಿ ಮೀಟಿಂಗ್ ಮತ್ತು ನ್ಯಾಷನಲ್ ಕಾನ್ಫರೆನ್ಸ್ –2025 ಉದ್ಘಾಟಿಸಿ ಮಾತನಾಡುತ್ತಾ, ಪ್ರಜಾಪ್ರಭುತ್ವದ ಕಾವಲು ಕಾಯುವವರೇ ಪತ್ರಕರ್ತರು. ನಿಮ್ಮ ಕೆಲಸದಲ್ಲಿ ಏರಿಳಿತ ಇರಬಹುದು. ದೇಶದಲ್ಲಿ ಇವತ್ತು ಸಂವಿಧಾನದ ತತ್ವವನ್ನು ರಕ್ಷಣೆ ಮಾಡಿಕೊಂಡು ಬಂದಿದ್ದೀರಿ. ಸಂಪೂರ್ಣವಾಗಿ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡ ಕ್ಷೇತ್ರ ಯಾವುದಾದರು ಇದ್ದಲ್ಲಿ ,ಅವು ಪತ್ರಿಕಾರಂಗ ಮತ್ತು ರಾಜಕಾರಣ ಇವೆರೆಡರ ಮೇಲೆ ಸಾಮನ್ಯ ಪ್ರಜೆಗಳು ಬಹಳಷ್ಟು ವಿಶ್ವಾಸ ಮತ್ತು ನಿರೀಕ್ಷೆ ಎರಡನ್ನೂ ಇಟ್ಟಿದ್ದಾರೆ, ನಾವು ಈ ನೆಲದ ಹಿತ ದೃಷ್ಟಿಯಿಂದ ಒಂದಾಗಿ ಸಾಗಿದಲ್ಲಿ ದೇಶದ ಅಭಿವೃದ್ಧಿಗೆ ಪೂರಕ ವಾತಾವರಣ ನಿರ್ಮಾಣವಾಗಲು ಸಾಧ್ಯ ಎಂದು ಕರ್ನಾಟಕ ವಿಧಾನಸಭೆಯ ಸಭಾಧ್ಯಕ್ಷ ಯು.ಟಿ ಖಾದರ್

–2ನೇ ಪುಟಕ್ಕೆ.....

## ಕುಡಿಯುವ ನೀರನ್ನು ವಿವಿಧ ಉದ್ದೇಶಗಳಿಗೆ ಬಳಸುವುದು ನಿಷೇಧಿಸಲಾಗಿದೆ ಬೆಂಗಳೂರು ಜಲಮಂಡಳಿಯಿಂದ ಆದೇಶ

**ವಾಕ್‌ಸಮರ ಸುದ್ದಿ**
**ವರದಿ : ಮಂಜುನಾಥ್ ಕೆ.ವಿ**

**ಬೆಂಗಳೂರು :** ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಕಾಯ್ದೆ–1964ರ ಕಲಂ 33 ಮತ್ತು 34 ರ ಅನುಸಾರ ಬೆಂಗಳೂರು ನಗರದಲ್ಲಿ ಕುಡಿಯುವ ನೀರನ್ನು ವಾಹನಗಳ ಸ್ವಚ್ಚತೆ ಕೈದೋಟಕ್ಕೆ, ಕಟ್ಟಡ ನಿರ್ಮಾಣಕ್ಕೆ, ಮನೋರಂಜಕವಾಗಿ ಕಾರಂಜಿಯಂತಹ ಆಕರ್ಷಕ ವ್ಯವಸ್ಥೆಗೆ, ಸಿನಿಮಾ ಮಂದಿರ ಮತ್ತು ಮಾಲುಗಳಲ್ಲಿನ ಕುಡಿಯುವ ನೀರಿನ ಹೊರತು ಇನ್ನಿತರೆ ಬಳಕೆ, ರಸ್ತೆ ನಿರ್ಮಾಣ ಮತ್ತು ಸ್ವಚ್ಚತೆಯ ಉದ್ದೇಶಗಳಿಗೆ ಬಳಸದಂತೆ ನಿಷೇಧಿಸಲಾಗಿದೆ ಎಂದು ಜಲಮಂಡಳಿಯ ಅಧ್ಯಕ್ಷರಾದ ಡಾ. ರಾಮ್ಪ್ರಸಾತ್ ಮನೋಹರ್ ಅವರು ತಿಳಿಸಿದ್ದಾರೆ. ನಿಷೇಧ ಆದೇಶವನ್ನು ಉಲ್ಲಂಘನೆ ಮಾಡಿದಲ್ಲಿ, ಉಲ್ಲಂಘನೆ ಮಾಡುವವರ ವಿರುದ್ದ ಜಲಮಂಡಳಿಯ ಕಾಯ್ದೆ 1964 ರ ಕಲಂ 109 ರಂತೆ ರೂ. 5000/– ಗಳ ದಂಡ ವಿಧಿಸಲಾಗುವುದು. ಈ ಉಲ್ಲಂಘನೆಯು ಮರುಕಳಿಸಿದಲ್ಲಿ ದಂಡ ಮೊತ್ತ ರೂ.5000/– ಜೊತೆಗೆ ಹೆಚ್ಚುವರಿಯಾಗಿ ರೂ.500/– ಪ್ರತಿದಿನದಂತೆ ದಂಡ ಹಾಕಲಾಗುವುದು.

ಬೆಂಗಳೂರು ಮಹಾನಗರದಲ್ಲಿ ಖಾಯಂ ವಾಸಿಗಳು ಹಾಗೂ ಬಂದು ಹೋಗುವವರನ್ನು ಸೇರಿಸಿ ಸುಮಾರು 1 ಕೋಟಿ 40 ಲಕ್ಷ ಜನಸಂಖ್ಯೆಯನ್ನು ಗುರುತಿಸಲಾಗಿದೆ. ಎಲ್ಲರಿಗೂ ಕುಡಿಯುವ ನೀರನ್ನು ಪೂರೈಕೆ ಮಾಡುವುದು ಅವಶ್ಯವಾಗಿರುತ್ತದೆ.

ಪ್ರಸ್ತುತ ನಗರದಲ್ಲಿ ಪ್ರತಿದಿನ ಉಷ್ಣಾಂಶ ಏರುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಮಳೆಯ ಕೊರತೆಯಿಂದ ಅಂತರ್ಜಲ ಕುಸಿದಿದ್ದು, ಬೆಂಗಳೂರು ನಗರದಲ್ಲಿ ನೀರನ್ನು ಪೋಲು ಮಾಡುವುದನ್ನು ತಡೆಗಟ್ಟಲು ಅವಶ್ಯವೆಂದು ಮನಗಂಡು ಕುಡಿಯುವ ನೀರನ್ನು ಸಾರ್ವಜನಿಕರು ಮಿತವಾಗಿ ಬಳಸುವಂತೆ ಅಗತ್ಯಪಡಿಸಲಾಗಿದೆ. ಈ ಹಿನ್ನಲೆಯಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಆದೇಶಿಸಿದೆ.

ಸಾರ್ವಜನಿಕರು ಕುಡಿಯುವ ನೀರನ್ನು ಇತರೆ ಉದ್ದೇಶಗಳಿಗಾಗಿ ಬಳಸುವುದು ಕಂಡುಬಂದಲ್ಲಿ ಕೂಡಲೇ ಬೆಂಗಳೂರು ಜಲಮಂಡಳಿಯ ಕಾಲ್ ಸೆಂಟರ್ ಸಂಖ್ಯೆ : 1916 ಗೆ ಕರೆ ಮಾಡಿ ತಿಳಿಸುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ವ ಸಹಾಯ ಸಂಘದ ಫಲಾನುಭವಿಗಳಿಗೆ ಕೌಶ್ಯಲಾಭಿವೃದ್ಧಿ ತರಬೇತಿ ಸಂಘದ ಫಲಾನುಭವಿಗಳಿಗೆ 6 ದಿನದ ಸೀರೆ ಕುಚ್ಚ ತರಬೇತಿಯ ಸಮಾರೋಪ





**ವಾಕ್‌ಸಮರ ಸುದ್ದಿ**
**ವರದಿ : ಆಶಾಮುರಳಿ**

ಹಿರೇಕೆರೂರ..ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ ಸಿ ಟ್ರಸ್ಟ್ ರಿಜಿಸ್ಟರ್ಡ್ ಹಿರೇಕೆರೂರು.. ಹಿರೇಕೆರೂರು ಯೋಜನಾ ಕಚೇರಿ ವ್ಯಾಪ್ತಿಯಲ್ಲಿ ಬರುವ ಹಿರೇಕೆರೂರ ವಲಯದ ದೂದಿಹಳ್ಳಿ ಕಾರ್ಯಕ್ಷೇತ್ರದ ಗಂಗಾಭಿಕೆ ಜ್ಞಾನವಿಕಾಸ ಕೇಂದ್ರದ ಸದಸ್ಯರಿಗೆ ಜ್ಞಾನವಿಕಾಸ ತರಬೇತಿ ಉಜ್ತಿ ಸಂಸ್ಥೆ ರಾಯಾಪುರ ಧಾರವಾಡ ಇವರ ಸಹಯೋಗದೊಂದಿಗೆ ಸ್ವ ಸಹಾಯ ಸಂಘದ ಫಲಾನುಭವಿಗಳಿಗೆ ಕೌಶ್ಯಲಾಭಿವೃದ್ಧಿ ತರಬೇತಿ ಸಂಘದ ಫಲಾನುಭವಿಗಳಿಗೆ 6 ದಿನದ ಸೀರೆ ಕುಚ್ಚ ತರಬೇತಿಯ ಸಮಾರೋಪ*ವನ್ನು ಹಮ್ಮಿಕೊಂಡಿದ್ದು ಸಭೆಯಲ್ಲಿ ತರಬೇತಿ ಸಂಸ್ಥೆಯ ಪ್ರಾಶುಂಪಾಲರಾದ ಜಗದೀಶ ಸರ್ವ ಮಾತನಾಡಿ ವೃತಿಯನ್ನು ಪ್ರವೃತಿಯಾಗಿ ರೂಡಿಸಿಕೊಂಡಾಗ ಮಾತ್ರ ಇವತ್ತು ಮಹಿಳೆಯರು ಆರ್ಥಿಕವಾಗಿ ಸ್ವಾವಲಂಭಿಯಾಗಿ ಜೀವನ ನಡೆಸಲು ಸುಲಭ ಸಾಧ್ಯವೆಂದು ಮಾಹಿತಿ ನೀಡಿದರು.

ನಂತರ ತಾಲೂಕಿನ ಮಾನ್ಯ ಯೋಜನಾಧಿಕಾರಿಯಾದ ಮಂಜುನಾಥ ಎಂ. 34ಜನ ಸದಸ್ಯರಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿ ಮಹಿಳೆ ಮನಸ್ಸು ಮಾಡಿದರೆ, ಏನನ್ನಾದರು ಸಾಧಿಸಬಹುದು ಮಹಿಳೆಯರು ಸಂಸಾರದ ಭಾರವನ್ನು ನಿಭಾಯಿಸುವ ಜೊತೆಗೆ ಇವತ್ತು ಆರ್ಮಕವಾಗಿ ಸಹ ಮುಂದೂವರೆದಿದ್ದು ಸ್ವ ಉದ್ಯೋಗಕ್ಕೆ ಹೆಚ್ಚು ಪ್ರೇರಣೆ ನೀಡುವ ದೃಷ್ಟಿಯಿಂದ ಇವತ್ತು ಗ್ರಾಮಾಭಿವೃದ್ಧಿ ಯೋಜನೆ ಮೂಲಕ ಇಂತಹ ತರಬೇತಿಯನ್ನು ಆಯೋಜನೆ ಮಾಡಿದ್ದು ಇಥರ ಸದುಪಯೋಗ ಪಡೆದುಕೊಳ್ಳುವಂತೆ ಮಾಹಿತಿ ನೀಡಿದ್ದರು ಸಭೆಯಲ್ಲಿ ಒಕ್ಕೂಟದ ಅಧ್ಯಕ್ಷರಾದ ವಿಜಯಾ ದೋಣೇರ ಉಪಾಧ್ಯಕ್ಷರಾದ ಸುಮಿತ್ರ ಪಾಟೀಲ್ ಉಪಸ್ಥಿತರಿದ್ದರು.

ಸಭೆಯಲ್ಲಿ ವಲಯದ ಮೇಲ್ವಿಚಾರಕರಾದ ಕಿರಣ ಎಂ ಸ್ವಾಗತಿಸಿ ಜ್ಞಾನವಿಕಾಸ ಸಮನ್ವಯಾಧಿಕಾರಿಯಾದ ಶ್ರೀಮತಿ ಶಶಿಕಲಾ ಈಶ್ವರ ನಿರೂಪಿಸಿ ವಂದಿಸಿದ್ದರು.

ಸಭೆಯಲ್ಲಿ ಸೇವಾಪ್ರತಿನಿಧಿಯಾದ ಅಕ್ಕಮ್ಮ ಹಾಗೂ VLE ಯಾದ ಯಶೋಧ ಹಾಗೂ ತರಬೇತಿ ಪಡೆದುಕೊಂಡ 34ಜನರು ಉಪಸ್ಥಿತರಿದ್ದರು ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನಡೆಯಿತು.

## ರಾಜ್ಯ ಸರಕಾರ ಹಾವೇರಿ ವಿಶ್ವವಿದ್ಯಾಲಯ ಮುಚ್ಚುವ ತೀರ್ಮಾನ ರದ್ದುಗೊಳಿಸಲು ಎಸ್‌ಎಫ್‌ಐ,, ಡಿವೈಎಫ್‌ಐ ಆಗ್ರಹ

**ಹಾವೇರಿ:** ಕಳೆದ ಎರಡು ವರ್ಷಗಳ ಹಿಂದೆ ಆರಂಭಗೊಂಡ ಹಾವೇರಿ ವಿಶ್ವವಿದ್ಯಾಲಯು ಸೇರಿದಂತೆ ರಾಜ್ಯದ ವಿವಿಧ 9 ವಿವಿಗಳನ್ನು ಮುಚ್ಚುವ ಬಗ್ಗೆ ಸಂಪುಟ ಉಪ ಸಮಿತಿ ತೀರ್ಮಾನಿಸಿರುವುದು ಆತಂಕಕಾರಿ ನಡೆಯಾಗಿದೆ. ರಾಜ್ಯ ಸರಕಾರ ವಿವಿ ಮುಚ್ಚುವ ತೀರ್ಮಾನವನ್ನು ರದ್ದುಪಡಿಸಿ ಯಥಾ ಸ್ಥಿತಿಯಲ್ಲಿ ವಿ.ವಿ ಮುಂದುವರೆಸಬೇಕೆಂದು

ಎಸ್‌ಎಫ್‌ಐ, ಡಿವೈಎಫ್‌ಐ ಸಂಘಟನೆಗಳು ಆಗ್ರಹಿಸಿವೆ.

ಈ ಕುರಿತು ಸೋಮವಾರ ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ಕಳೆದ ಎರಡು ವರ್ಷದಿಂದ ಯಾವುದೇ ಅನುದಾನವಿಲ್ಲದಿದ್ದರೂ ಕೂಡ ಉತ್ತಮವಾಗಿ ಕಾರ್ಯನಿರ್ವಹಿಸಿಕೊಂಡು ಬರುತ್ತಿರುವ ಹಾವೇರಿ ವಿಶ್ವವಿದ್ಯಾಲಯವನ್ನು ಮುಚ್ಚಲು ರಾಜ್ಯ ಸರಕಾರ ಮುಂದಾಗಿರುವುದು ಯಾವುದೇ ರೀತಿಯಲ್ಲಿ ಸಮರ್ಥನೀಯವಲ್ಲ.

ಕಳೆದ ಎರಡು ವರ್ಷಗಳು ಯಾವುದೇ ಅನುದಾನವಿಲ್ಲದೆ ಸಂಕಷ್ಟಮಯ ಪರಿಸ್ಥಿತಿಯಲ್ಲಿಯೂ ಕೂಡ ಹಾವೇರಿ ವಿಶ್ವ ವಿದ್ಯಾಲಯವು ಉತ್ತಮವಾಗಿ ಕಾರ್ಯನಿರ್ವ ಹಿಸಿಕೊಂಡು ಬರುತ್ತಿದೆ. ಅಲ್ಲದೆ ಹಲವು ಪ್ರಮುಖ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು ಮುನ್ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ವಿಶ್ವವಿದ್ಯಾಲಯಕ್ಕೆ ಪೂರ್ಣಕಾಲಿಕ ಉಪನ್ಯಾಸಕರು, ಬೋದಕೇತರ ಸಿಬ್ಬಂದಿ ನೇಮಕ, ಅನುದಾನ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಸರಕಾರ ಒದಗಿಸಬೇಕಿತ್ತು.

ವಿಶ್ವ ವಿದ್ಯಾಲಯಗಳನ್ನು ಬಲಿಷ್ಠಪಡಿಸುವ ಬದಲು ವಿ.ವಿ ಗಳನ್ನು ಮುಚ್ಚುವ ತೀರ್ಮಾನವು ಹಾವೇರಿ ಜಿಲ್ಲೆಯ ಬಡ ಹಾಗೂ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ವಂಚಿಸುವುದಾಗಿದೆ. ಹಾಗಾಗಿ ಸಂಪುಟ ಸಮಿತಿ ತೆಗೆದುಕೊಂಡಿರುವ ನಿರ್ಧಾರವನ್ನು ಯಾವುದೇ ಕಾರಣ ನೀಡದೇ ಕೂಡಲೇ ಹಿಂಪಡೆಯಬೇಕು.

ಜಿಲ್ಲೆಯ ಜನರ ಹಾಗೂ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಹಾವೇರಿ ವಿವಿ ಮುಚ್ಚದಂತೆ ಜಿಲ್ಲೆಯ ಎಲ್ಲ ಶಾಸಕರು ಮೌನವಹಿಸದೇ ಕೂಡಲೇ ಈ ವಿಷಯದಲ್ಲಿ ಮಧ್ಯೆಪ್ರವೇಶಿಸಿ ಸಂಪುಟ ಉಪಸಮಿತಿಯ ತೀರ್ಮಾನ ಹಿಂಪಡೆಯಲು ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳಿಗೆ ಒತ್ತಡ ಹೇರಬೇಕೆಂದು ಆಗ್ರಹಿಸಿವೆ.

ಹಾವೇರಿ ಜಿಲ್ಲೆಗೆ ವಿಶ್ವವಿದ್ಯಾಲಯ ಅತ್ಯವಶ್ಯವಾಗಿದ್ದು ಈ ಬಗ್ಗೆ ಸಂಪುಟ ಸಮಿತಿಯ ತೀರ್ಮಾನವನ್ನು ಹಿಂಪಡೆಯಬೇಕು ಹಾಗೂ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ವಿಶ್ವವಿದ್ಯಾಲಯ ಬೆಳವಣಿಗೆ ಹೊಂದಲು ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ವಿಶ್ವ ವಿದ್ಯಾಲಯದ ಉಳಿವಿಗಾಗಿ ತೀವ್ರತೆರನಾದ ಪ್ರತಿಭಟನೆ ನಡೆಸಲು ಮುಂದಾಗುವುದಾಗಿ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ, ಎಸ್‌ಎಫ್‌ಐ, ಜಿಲ್ಲಾಧ್ಯಕ್ಷ ಬಸವರಾಜ ಎಸ್, ಹಿರಿಯ ಸಾಹಿತಿಗಳಾದ ಸತೀಶ ಕುಲಕರ್ಣಿ, ಪರಿಮಳ ಜೈನ್ ತಿಳಿಸಿದ್ದಾರೆ.

## ತಂಬಾಕು ದಾಳಿ, ರೂ.8700 ದಂಡ ವಸೂಲಿ




**ವಾಕ್‌ಸಮರ ಸುದ್ದಿ**
**ವರದಿ : ಆಶಾಮುರಳಿ**

ದಾವಣಗೆರೆ : ಪೊಲೀಸ್ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ವತಿಯಿಂದ, ಫೆಬ್ರವರಿ 17 ರಂದು ಬಿ.ಐ.ಇ.ಟಿ ರಸ್ತೆ ಹಾಗೂ ಬಾಪೂಜಿ ಎಂ.ಬಿ.ಎ ಕಾಲೇಜ್ ರಸ್ತೆಯಲ್ಲಿ ವ್ಯಾಪ್ತಿಯಿಂದ 100 ಗಜದ ಅಂತರದೊಳಗೆ ತಂಬಾಕು ಹಾಗೂ ಅದರ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಎಚ್ಚರಿಕೆ ನೀಡಿ ಕೊಟ್ಪಾದಡಿ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ವತಿಯಿಂದ 20 ಪ್ರಕರಣಗಳನ್ನು ದಾಖಲಿಸಿ ರೂ.4900/- ಹಾಗೂ ಪೊಲೀಸ್ ಇಲಾಖೆ ವತಿಯಿಂದ 19 ಪ್ರಕರಣಗಳನ್ನು ದಾಖಲಿಸಿ ರೂ.3800/- ದಂಡ ವಿಧಿಸಲಾಯಿತು.

ದಾಳಿಯಲ್ಲಿ ಜಿಲ್ಲಾ ಸಲಹೆಗಾರ ಸತೀಶ್ ಕಲಹಾಳ್, ಪಿ.ಎಸ್.ಐ ವಿಶ್ವನಾಥ ಹಾಗೂ ಎಂ.ವಿಜಯ, ಸಮಾಜ ಕಾರ್ಯಕರ್ತೆ ಶೈಲಾ ಶಾಮನೂರು, ಹಿರಿಯ ಆರೋಗ್ಯ ನಿರೀಕ್ಷಣಾಧಿ ಕಾರಿ ವೆಂಕಟಚಾಲಕುಮಾರ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಉಮಾಪತಿ, ಆರೋಗ್ಯ ನಿರೀಕ್ಷಕ ಹರೀಶ್, ಎ.ಎಸ್.ಐ ನಟರಾಜ್ ಆಚಾರ್, ಚಂದ್ರಶೇಖರ್ ಹಾಗೂ ಕೋಟ್ರೇಶ್ ಪೊಲೀಸ್ ಸಿಬ್ಬಂದಿ ಇತರರಿದ್ದರು.

## ಐಪಿಎಲ್ ಮಾದರಿಯ ಕ್ರಿಕೆಟ್ ಸೇರಿದಂತೆ ವಿವಿಧ ಕ್ರೀಡಾ ಪಂದ್ಯಾವಳಿಗಳ ಜಿಎಂ ಲೀಗ್ ಸಮಾರೋಪ

ದಾವಣಗೆರೆ : ಐಪಿಎಲ್ ಮಾದರಿಯಲ್ಲಿ ದಿವಂಗತ ಜಿ. ಮಲ್ಲಿಕಾರ್ಜುನಪ್ಪ ಅವರ ಹೆಸರಿನಡಿಯ ಕ್ರಿಕೆಟ್ ಸೇರಿದಂತೆ ವಿವಿಧ ಕ್ರೀಡಾ ಪಂದ್ಯಾವಳಿಗಳ ಜಿಎಂ ಲೀಗ್ ಫೆಬ್ರವರಿ 17 ರಂದು ಯಶಸ್ವಿಯಾಗಿ ಸಮಾರೋಪಗೊಂಡಿತು.

ದಾವಣಗೆರೆಯ ಜಿಎಂ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ವ್ಯವಹಾರಗಳ ನಿರ್ದೇಶನಾಲಯ ಹಾಗೂ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ವತಿಯಿಂದ ಫೆಬ್ರವರಿ 4 ರಿಂದ 17ರವರೆಗೆ ಜಿಎಂ ವಿಶ್ವವಿದ್ಯಾಲಯದ ಕ್ರೀಡಾ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಫೆಬ್ರವರಿ 17ರ ಸಂಜೆ ಜಿಎಂ ವಿಶ್ವವಿದ್ಯಾಲಯದ ಕುಲಾಧಿಪತಿಗಳಾದ ಜಿ.ಎಂ. ಲಿಂಗರಾಜು ಅವರು ವಿಜೇತ ತಂಡಗಳಿಗೆ ಚಾಂಪಿಯನ್ ಟ್ರೋಫಿ, ನಗದು ಬಹುಮಾನ ಹಾಗೂ ರನ್ ಅಪ್ ಪ್ರಶಸ್ತಿಗಳ ನೀಡಿ ಪ್ರೋತ್ಸಾಹಿಸಿದರು.

ಈ ವೇಳೆ ಸಹಕುಲಪತಿಗಳಾದ ಡಾ. ಹೆಚ್.ಡಿ. ಮಹೇಶಪ್ಪ, ಜಿ.ಎಂ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಶ್ರೀಧರ್, ಜಿಎಂಎಸ್ ಅಕಾಡೆಮಿಯ ಎಎಓ ಜಿ.ಜೆ. ಶಿವಕುಮಾರ್, ಜಿಎಂಹೆಚ್‌ಎಸ್ ಪ್ರಾಂಶುಪಾಲ ರಾದ ಡಾ. ಓಂಕಾರಪ್ಪ ಹೆಚ್.ಎಸ್., ಜಿಎಂಯು ಮುಖ್ಯ ಹಣಕಾಸು ಅಧಿಕಾರಿಗಳಾದ ಸಿ.ಎ. ಅಶೋಕ್ ಹುಕ್ಕರ್ಡೆ, ಜಿಎಂಯು ಎಫ್‌ಇಟಿ ಡೀನ್ ಡಾ.

### 399 ನೇ ಶಿವಾಜಿ ಜಯಂತ್ಯುತ್ಸವದ ಪ್ರಯುಕ್ತವಾಗಿ ಬರೆದ ಲೇಖನ.

# ಶ್ರೀ ಛತ್ರಪತಿ ಶಿವಾಜಿ ಮಹಾರಾಜರು

1. ಶಿವಾಜಿ ಮಹಾರಾಜರ ಹಿನ್ನೆಲೆ:

ಛತ್ರಪತಿ ಶಿವಾಜಿ ಮಹಾರಾಜರು 1630 ಫೆಬ್ರವರಿ 19ರಂದು ಪುಣೆಯಲ್ಲಿ ಜನಿಸಿರುತ್ತಾರೆ. ಇವರನ್ನು ಮರಾಠ ಸಾಮ್ರಾಜ್ಯದ ಸ್ಥಾಪಕರೆಂದು ಪರಿಗಣಿಸಲಾಗಿದೆ.

ಅವರು ತಮ್ಮ ಅತ್ಯುತ್ತಮ ನಾಯಕತ್ವ, ಆಡಳಿತ ತಂತ್ರಗಳು ಮತ್ತು ಪ್ರಬುದ್ಧ ಆಡಳಿತಕ್ಕೆ ಹೆಸರುವಾಸಿಯಾಗಿದ್ದಾರೆ. ಅವರ ಆಳ್ವಿಕೆಯ ಅವಧಿಯು ಆಡಳಿತ ಮತ್ತು ನ್ಯಾಯಾಲಯ ವಲಯಗಳಲ್ಲಿ ಪರ್ಷಿಯನ್ ಭಾಷೆಗಿಂತ ಮರಾಠಿ ಮತ್ತು ಸಂಸ್ಕೃತಕ್ಕೆ ಆದ್ಯತೆ ನೀಡುವ ಮೂಲಕ ಗುರುತಿಸಲ್ಪಟ್ಟಿತು, ಇದು ಅವರ ಸಾಂಸ್ಕೃತಿಕ ರಾಷ್ಟ್ರೀಯತೆಯನ್ನು ಸೂಚಿಸುತ್ತದೆ. ಶಿವಾಜಿಯವರನ್ನು ಭಾರತೀಯ ನೌಕಾಪಡೆಯ ಪಿತಾಮಹರನ್ನಾಗಿ ಮಾಡಲಾಗಿದೆ. ದಾರ್ಶನಿಕ ಆಡಳಿತ ಶೈಲಿ ಮತ್ತು ವಿದೇಶಿ ಆಕ್ರಮಣಗಳ ನಡುವೆಯೂ ಹಿಂದೂ ಪದ್ಧತಿಗಳನ್ನು ಸಂರಕ್ಷಿಸಿದ ಮಹಾನ್ ವೀರನೀತ. 1674 ರಲ್ಲಿ ಛತ್ರಪತಿಯಾಗಿ ಅವರ ಪಟ್ಟಾಭಿಷೇಕವು ಮರಾಠ ಸಾಮ್ರಾಜ್ಯದ ಅಧಿಕೃತ ರಚನೆಗೆ ಕಾರಣವಾಯಿತು.

**2. ಛತ್ರಪತಿ ಶಿವಾಜಿ ಮಹಾರಾಜರು ಯಾರು?**

ಶಿವಾಜಿ ಮಹಾರಾಜರ ಪೂರ್ಣ ಹೆಸರು ಛತ್ರಪತಿ ಶಿವಾಜಿ ಮಹಾರಾಜ್ ಬೋಂಸ್ಲೆ. ಇವರು ಕ್ರಿ.ಶ 1630 ರಿಂದ 1680 ರವರೆಗೆ ಆಳ್ವಿಕೆಯನ್ನು ಮಾಡಿದವರು. ಇವರು ಓರ್ವ ಪ್ರಸಿದ್ಧ ಮರಾಠ ರಾಜ. ಅವರು ಮೊಘಲ್ ಆಳ್ವಿಕೆಯನ್ನು ಧಿಕ್ಕರಿಸಿ ಸಾರ್ವಭೌಮ ಹಿಂದೂ ರಾಜ್ಯಕ್ಕೆ ಅಡಿಪಾಯ ಹಾಕಿದವರು. ಮಹಾರಾಷ್ಟ್ರದ ಪುಣೆಯ ಜುನ್ನಾರ್ ಬಳಿ ಶಹಾಜಿ ಬೋಂಸ್ಲೆ ಮತ್ತು ಜೀಜಾಬಾಯಿ ದಂಪತಿಗಳಿಗೆ ಜನಿಸಿದ ಶಿವಾಜಿಯನ್ನು ಅವರ ಮಿಲಿಟರಿ ತಂತ್ರ, ಆಡಳಿತ ಮತ್ತು ಸ್ವರಾಜ್ಯದ ಉನ್ನತಿಗಾಗಿ ಸ್ಮರಿಸಲಾಗುತ್ತದೆ.

3. ಶಿವಾಜಿ ಜಯಂತಿಯ ಮಹತ್ವ:

ಶಿವಾಜಿ ಜಯಂತಿಯನ್ನು ಮಹಾರಾಷ್ಟ್ರದಲ್ಲಿ ಅತ್ಯಂತ ಅದ್ದೂರಿಯಾಗಿ ಆಚರಿಸಲಾಗುತ್ತದೆ. ಅಲ್ಲಿ ಅವರನ್ನು ಶೌರ್ಯ, ನಾಯಕತ್ವ ಮತ್ತು ದೇಶಭಕ್ತಿಯ ಸಂಕೇತವೆಂದು ಪೂಜಿಸಲಾಗುತ್ತದೆ. ಮೆರವಣಿಗೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ಅವರ ಪರಂಪರೆಯ ಆಚರಣೆಗಳೊಂದಿಗೆ ದಿನವನ್ನು ಆಚರಿಸಲಾಗುತ್ತದೆ. ಶಾಲೆಗಳು ಮತ್ತು ಸಂಸ್ಥೆಗಳು ಅವರ ಕೊಡುಗೆಗಳನ್ನು ಗೌರವಿಸಲು ನಾಟಕಗಳು ಮತ್ತು ಭಾಷಣಗಳನ್ನು ಆಯೋಜಿಸುತ್ತವೆ.

4. ಛತ್ರಪತಿ ಶಿವಾಜಿ ಮಹಾರಾಜರ ಕೋಟ್ಸ್‌ಗಳು:

– "ಪ್ರತಿಯೊಬ್ಬರ ಕೈಯಲ್ಲಿ ಕತ್ತಿ ಇದ್ದರೆ ಸಾಕಾಗುವುದಿಲ್ಲ; ನಿಜವಾದ ಶಕ್ತಿ ನಿರ್ಣಯ ಮತ್ತು ನಾಯಕತ್ವದಲ್ಲಿದೆ."

– "ಸ್ವಾತಂತ್ರ್ಯವು ಪ್ರತಿಯೊಬ್ಬ ವ್ಯಕ್ತಿಯು ಅರ್ಹವಾದ ಉಡುಗೊರೆಯಾಗಿದೆ."

– "ಬುದ್ಧಿವಂತಿಕೆಯು ಕಲಿಕೆಯಿಂದ ಬರುತ್ತದೆ, ಕೇವಲ ವೈಯಕ್ತಿಕ ಅನುಭವಗಳಿಂದಲ್ಲ, ಆದರೆ ಕೆಲವೊಮ್ಮೆ ಇತರರ ತಪ್ಪುಗಳನ್ನು ಗಮನಿಸುವುದರಿಂದಲೂ ಸಹ."

– "ನಿಜವಾದ ಧೈರ್ಯವು ಜ್ಞಾನದಿಂದ ಮಾರ್ಗದರ್ಶಿಸಲ್ಪಡುತ್ತದೆ ಮತ್ತು ಬಲಿಷ್ಠ ಯೋಧ ಕೂಡ ಬುದ್ಧಿವಂತಿಕೆಯನ್ನು ಗೌರವಿಸುತ್ತಾನೆ."

– "ಮಹಿಳೆಯರಿಗೆ ನೀಡಲಾದ ಎಲ್ಲಾ ಹಕ್ಕುಗಳಲ್ಲಿ, ಅತ್ಯಂತ ಮಹತ್ವದ್ದಾಗಿರುವ ಹಕ್ಕೆಂದರೆ ಅದುವೇ ತಾಯಿಯಾಗುವ ಹಕ್ಕು."

2025ರ ಫೆಬ್ರವರಿ 19ರಂದು ಛತ್ರಪತಿ ಶಿವಾಜಿ ಮಹಾರಾಜರ 395ನೇ ಜನ್ಮವಾರ್ಷಿಕೋತ್ಸವವನ್ನು ಆಚರಿಸಲಾಗುತ್ತಿದೆ. ಈ ದಿನ ಶಿವಾಜಿ ಮಹಾರಾಜರ ಕೊಡುಗೆ, ಧೈರ್ಯ, ಶೌರ್ಯ ಹಾಗೂ ಧರ್ಮದ ಬಗೆಗಿನ



ಗೌರವವನ್ನು ಸ್ಮರಿಸಲಾಗುತ್ತದೆ.

ಹದಿನೇಳನೆಯ ಶತಮಾನದಲ್ಲಿ ದಖನ್ ಭಾಗದಲ್ಲಿ ಮರಾಠರಾಜ್ಯ ಉದಯವಾಗಿದ್ದು ಒಂದು ಪ್ರಮುಖ ಬೆಳವಣಿಗೆ. ಇದು ಇಂದಿನ ಪಶ್ಚಿಮ ಭಾರತದ ಭಾಗದಲ್ಲಿ ವಿಸ್ತರಿಸಿತ್ತು.ಹದಿನೇಳನೇಯ ಶತಮಾನದಲ್ಲಿ ಮರಾಠವಾಡ ಪ್ರದೇಶವು ಅಹಮದ್ ನಗರದ ನಿಜಾಮ್‌ಶಾಹಿ ಮತ್ತು ಬಿಜಾಪುರದ ಆದಿಲ್‌ಶಾಹಿಗಳ ಆಧೀನದಲ್ಲಿತ್ತು. ಈ ಸುಲ್ತಾನರು ಸ್ಥಳೀಯ ಮರಾಠರನ್ನು ಸೈನ್ಯದಲ್ಲಿ ನೇಮಕ ಮಾಡಿಕೊಂಡಿದ್ದರು.ಷಹಾಜಿ ಭೋಸ್ಲೆ ಬಿಜಾಪುರ ಸುಲ್ತಾನರಲ್ಲಿ ಆಡಳಿತಗಾರನಾಗಿದ್ದು ಸುಲ್ತಾನರಿಂದ ಕೆಲವು ಜಾಹಗೀರುಗಳನ್ನು ಪಡೆದುಕೊಂಡಿದ್ದರು. ದೇಶಪಾಂಡೆ ಮತ್ತು ದೇಶಮುಖರು ಸ್ಥಳೀಯವಾಗಿ ಪ್ರಭಾವಿ ನಾಯಕರಾಗಿದ್ದರು.ಬೆಟ್ಟಗುಡ್ಡ, ಕಾಡುಮೇಡುಗಳಲ್ಲಿ ಅಡಗಿ ಕುಳಿತು ಒಮ್ಮೇಲೆ ಶತ್ರುಗಳ ಮೇಲೆ ದಾಳಿ ಮಾಡುವ ಯುದ್ಧ ಕಲೆಯಾದ ಗೇರಿಲ್ಲಾ ಯುದ್ಧ ಕಲೆಯನ್ನು ಕರಗತ ಮಾಡಿಕೊಂಡಿದ್ದನು.

ಶಿವಾಜಿಯು 20ನೇ ವಯಸ್ಸನ್ನು ತಲುಪುವದಕ್ಕಿಂತ ಮೊದಲೇ ಸೈನಿಕ ಜೀವನವನ್ನು ಆರಂಭಿಸಿದ್ದನು. ಮಾವಳಿಯರ ನೆರವಿನಿಂದ ಅವನು ತೋರಣಗಲ್ಲು ಕೋಟೆಯನ್ನು ವಶಪಡಿಸಿಕೊಂಡನು.

ಇವನು ಚಕಾನಕೊಂಡ, ಸಿಂಹಗಡ ಮತ್ತು ಪುರಂದರಗಡ ಮುಂತಾದ ಅನೇಕ ಕೋಟೆಗಳನ್ನು ಬಿಜಾಪುರ ಸುಲ್ತಾನನಿಂದ ಗೆದ್ದುಕೊಂಡನು. ಭಾರಿ ನಷ್ಟ ಅನುಭವಿಸಿದ ಬಿಜಾಪುರ ಸುಲ್ತಾನನು ಷಹಜಿಯನ್ನು ಬಂಧಿಸಿದನು. ಆ ವೇಳೆಯಲ್ಲಿ ಶಿವಾಜಿಯು ತನ್ನ ರಾಜನೈತಿಕ ಚತುರತೆಯಿಂದ ತನ್ನ ತಂದೆಯನ್ನು ಬಿಡುಗಡೆಗೊಳಿಸಿಕೊಂಡನು

.ನಂತರ ಶಿವಾಜಿಯು ತನ್ನ ಗಮನವನ್ನು ಕೊಂಕಣ ತೀರದ ಕಡೆ ಹರಿಸಿ ಜಾವಳಿಯನ್ನು ಅಕ್ರಮಿಸಿದನು.ಇಲ್ಲಿ ಅವನು ಪ್ರತಾಪಗಡ ಎಂಬ ಕೋಟೆಯನ್ನು ನಿರ್ಮಿಸಿದನು. ಆದಿಲ್‌ಶಾಯಿ ಸುಲ್ತಾನನ ವಿರುದ್ಧ ಶಿವಾಜಿಯ ಸೈನಿಕ ಚಟುವಟಿಕೆಗಳು ಮುಂದುವರೆದವು.ಇದರಿಂದಾಗಿ ಶಿವಾಜಿಯನ್ನು ಶಿಕ್ಷಿಸಲು ಬಿಜಾಪುರದ ಸುಲ್ತಾನನು ಅಪ್ಜಲ್‌ಖಾನ್‌ನನ್ನು ಕಳುಹಿಸಿದನು..

ಆದರೆ ಶಿವಾಜಿಯು ತುಂಬಾ ಚತುರತೆಯಿಂದ ಅವನನ್ನು ಕೊಂದು ಅವನ ಬಿಡಾರವನ್ನು ಲೂಟಿ ಮಾಡಿದನು.ಕ್ರಿ.ಸ 1661 ರಲ್ಲಿ ಬಿಜಾಪುರದ ಸುಲ್ತಾನನು ಶಾಂತಿ ಒಪ್ಪಂದ ಮಾಡಿಕೊಂಡು ಶಿವಾಜಿಯ ಆಕ್ರಮಿತ ಪ್ರದೇಶಗಳಿಗೆ ಮಾನ್ಯತೆ ನೀಡಿದನು.

ತದ ನಂತರ ಔರಂಗಜೇಬನಿಗೆ ಸೇರಿದ್ದ ಹಲವಾರು ಕೋಟೆಗಳು ಮತ್ತು ಪ್ರದೇಶಗಳನ್ನು ಶಿವಾಜಿ ಗೆದ್ದುಕೊಂಡನು. ಶಿವಾಜಿಯ ಅಕ್ರಮಣ ತಡೆಯಲು ಔರಂಗಜೇಬ ಶಯಿಸ್ತಾ ಖಾನ್‌ನನ್ನು ದಖ್ಖನ್ನಿನ ನೂತನ ರಾಜ್ಯಪಾಲನನ್ನಾಗಿ ನೇಮಿಸಿದನು. ಪೂನಾವನ್ನು ಒಳಗೊಂಡಂತೆ ವಿಶಾಲ ಮರಾಠ ಪ್ರದೇಶ(ಕೊಂಕಣ) ಮತ್ತು ಚಕಾನ್ ಕೋಟೆಗಳನ್ನು ವಶಪಡಿಸಿಕೊಳ್ಳುವಲ್ಲಿ ಶಯಿಸ್ತಾಖಾನ್ ಯಶಸ್ವಿಯಾದನು. ನಂತರ ಶಯಿಸ್ತಾಖಾನನು ಶಿವಾಜಿಯು ತನ್ನ ಬಾಲ್ಯ ಜೀವನವನ್ನು ಕಳೆದ ಪೂನಾದ ಮನೆಯಲ್ಲೇ ಬಂದು ನೆಲೆಸಿದನು. ಶಾಲಿವಾಹನ ಶಕೆ 1663ರಲ್ಲಿ ಕೆಲವೇ ನೂರು ಸೈನಿಕ ರೊಂದಿಗೆ ವಿವಾಹ ದಿಬ್ಬಣದವರಂತೆ ವೇಶ ಮರೆಸಿಕೊಂಡು ಶಿವಾಜಿಯು ಪೂನಾ ನಗರವನ್ನು ಪ್ರವೇಶಿಸಿದನು.ಸುಲಭವಾಗಿ ಆ ಮನೆಯೊಳಗೆ ದಾರಿ ಕಂಡುಕೊಂಡ ಶಿವಾಜಿಯು ಶಯಿಸ್ತಾಖಾನ್‌ನನ ಮೇಲೆ ದಾಳಿ ಮಾಡಿದನು.

ಆಗ ಶಯಿಸ್ತಾಖಾನ್‌ನನ ತನ್ನ ಕೈಬೆರಳುಗಳನ್ನು ಕಳೆದುಕೊಂಡು ಪಲಾಯನ ಮಾಡಿದನು.ಇದು ಶಿವಾಜಿಯ ಖ್ಯಾತಿಯನ್ನು ಹೆಚ್ಚಿಸಿತು.

ಶಿವಾಜಿಯು ಕ್ರಿ,ಸ್ತ 1674 ರಲ್ಲಿ ರಾಜನಾಗಿ ಕಿರೀಟಧಾರಣೆ ಮಾಡಿಕೊಂಡರು.ಇವರ ಪಟ್ಟಾಭಿಷೇಕವು ರಾಯಗಡ ಎಂಬಲ್ಲಿ ವೈಭವ ಮತ್ತು ವೈದ್ಧಿಕ ವಿಧಿಯಾಚರಣೆಗಳ ಪ್ರಕಾರ ನಡೆಯಿತು. ಶಿವಾಜಿ ತನ್ನ ವಿಶಾಲ ರಾಜ್ಯದಲ್ಲಿ ಉತ್ತಮ ಆಡಳಿತ ಸಂಘಟಿಸಿದ್ದನು. ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ಅನೇಕ ಪ್ರಾಂತ್ಯಗಳನ್ನಾಗಿ ವಿಂಗಡಿಸಿದ್ದನು.ಅವುಗಳನ್ನು ಸ್ವರಾಜ್ಯ ಮತ್ತು ಮೊಗಲರ ರಾಜ್ಯಗಳೆಂದು ಕರೆಯುತ್ತಿದ್ದರು. ಮರಾಠಿ ಆಡಳಿತ ಭಾಷೆಯಾಗಿತ್ತು.ಸರ್ಕಾರದ ಮುಖ್ಯಸ್ಥರಾಗಿದ್ದ ದೊರೆಗೆ ಆಡಳಿತದಲ್ಲಿ ನೆರವು ನೀಡಲು ಅಷ್ಠ ಪ್ರಧಾನರೆಂಬ ಮಂತ್ರಿಗಳಿದ್ದರು.

ಜೊತೆಗೆ ಸಹಾಯಕ್ಕಾಗಿ ಇತರೆ ಅಧಿಕಾರಿಗಳಿದ್ದರು. ಪ್ರಾಂತ, ಜಿಲ್ಲೆ ಗ್ರಾಮ ಆಡಳಿತದ ಘಟಕಗಳಾಗಿದ್ದವು. ಹಾಗೆಯೇ ಶಿವಾಜಿಯು ಕಂದಾಯ ಪದ್ಧತಿ ರೈತರಿಗೆ ಅನುಕೂಲಕರವಾಗಿತ್ತು. ಅವನು ಜಹಗೀರದಾರಿ ಕಂದಾಯ ಪದ್ಧತಿಯನ್ನು ರದ್ದುಪಡಿಸಿದನು.ಕಂದಾಯವನ್ನು ಹಣದ ಅಥವಾ ವಸ್ತು ರೂಪದಲ್ಲಿ ನೀಡಬೇಕಿತ್ತು.ಚಾತ ಮತ್ತು ಸರದೇಶಮುಖಿಯೆಂಬ ಭೂಕಂದಾಯಗಳಿದ್ದವು. ಶಿವಾಜಿ ಆಡಳಿತದಲ್ಲಿ ರಾಜನೇ ಸರ್ವೋಚ್ಚ ನ್ಯಾಯಾಧೀಶ ನಾಗಿದ್ದನು. ಗ್ರಾಮ ಪಂಚಾಯತಿಗಳಲ್ಲಿ ನಾಗರಿಕ ಮೊಕದ್ದಮೆ ಗಳನ್ನು ಮತ್ತು ಜಿಲ್ಲಾಧಿಕಾರಿಗಳು,ಹಾಗೂ ರಾಜ್ಯಪಾಲರು ಅಪರಾಧ ಪ್ರಕರಣಗಳನ್ನು ಇತ್ಯರ್ಥಪಡಿಸುತ್ತಿದ್ದರು.ಗ್ರಾಮ ನ್ಯಾಯಾಲಯಗಳ ತೀರ್ಪುಗಳಿಗೆ ರಾಜ ಮನ್ನಣೆ ಇತ್ತು.ರಾಜ ಮತ್ತು ನ್ಯಾಯಾ ಧೀಶರು ಮೇಲ್ಮನವಿಗಳ ಬಗ್ಗೆ ಆಲಿಸುತ್ತಿದ್ದರು.

ನ್ಯಾಯಾಧೀಶರು ನಾಗರಿಕ ಮತ್ತು ಸೈನಿಕ ನ್ಯಾಯ ನಿರ್ವಹಣೆಗೆ ಜವಾಬ್ದಾರಿಯಾಗಿದ್ದನು.

ಶಿವಾಜಿಯು ಸಾಮ್ರಾಜ್ಯದಲ್ಲಿ ಸೈನಿಕ ವ್ಯವಸ್ಥೆ ಉತ್ತಮವಾಗಿತ್ತು. ರಾಜನೇ ಸೈನ್ಯದ ಮುಖ್ಯಸ್ಥನಾಗಿದ್ದನು. ಸೇನಾಪತಿ ಅವನ ಆಧೀನದಲ್ಲಿದ್ದನು.

ಶಿವಾಜಿಯ ಸೈನ್ಯವು ಕಾಲ್ದಳ,ಅಶ್ವದಳ, ಗಜದಳ, ಒಂಟೆದಳ ಮತ್ತು ಫಿರಂಗಿಪಡೆಗಳನ್ನು ಒಳಗೊಂಡಿತ್ತು. ಕಾಲ್ದಳ ಸೈನಿಕರಿಗೆ ಗೆರಿಲ್ಲಾ ಮತ್ತು ಪರ್ವತ ಯುದ್ಧ ಕಲೆಯಲ್ಲಿ ತರಬೇತಿ ನೀಡಲಾಗುತ್ತಿತ್ತು.

ಸೈನಿಕರು ಮಹಿಳೆಯರನ್ನು ಯುದ್ಧ ಭೂಮಿಗೆ ಕರೆದುಕೊಂಡು ಹೋಗುವಂತಿರಲಿಲ್ಲ. ಕಾಲ್ದಳ ಮತ್ತು ಅಶ್ವದಳದಲ್ಲಿ ನಾಯಕರು,ಹವಾಲ್ದಾರರು, ಜುಮ್ಲಾದಾರರು, ಹಜಾರಿಗಳು ಮತ್ತಿತರ ವಿವಿಧ ಶ್ರೇಣೀಯ ಸೈನಾಧೀಕಾರಿಗಳು ಇದ್ದರು. ಶಿವಾಜಿಯು 200 ಹಡಗುಗಳನ್ನೊಳಗೊಂಡ ಬಲಿಷ್ಠ ನೌಕಾಪಡೆ ಹೊಂದಿದ್ದನು.ಕಾನ್ಹೋಜಿ ಆಂಗ್ರೆ ಮರಾಠರ ಪ್ರಸಿದ್ಧ ನೌಕಾದಳದ ಮುಖ್ಯಸ್ಥನಾಗಿದ್ದನು. ಮುಂದುವರೆದು ಶಿವಾಜಿಯ ನಂತರ ಅನೇಕ ಉತ್ತರಾಧಿಕಾರಿಗಳು ಆಡಳಿತಕ್ಕೆ ಬಂದರು. ಶಿವಾಜಿಗೆ ಮರಣದ ಸಮಯದಲ್ಲಿ ಆತನ ಪತ್ನಿಯರಾದ ಸಾಯಿಬಾಯಿ (ಸಂಬಾಜಿಯ ತಾಯಿ) ಸೊಯ್ರಾಬಾಯಿ ಶಿರ್ಕೆ(ರಾಜಾರಾಮನ ತಾಯಿ) ಇವರ ಮಧ್ಯ ಅಂತರಿಕ ಕಲಹ ಉಂಟಾಯಿತು. ಸಂಬಾಜಿ ತನ್ನ ಶಕ್ತಿಯಿಂದ ಮರಾಠ ರಾಜ್ಯವನ್ನು ವಶಪಡಿಸಿಕೊಂಡು ಆಳ್ವಿಕೆ ಪ್ರಾರಂಭಿಸಿದನು. ಈತನಿಗೆ ದೂರದೃಷ್ಠಿ ಮತ್ತು ವಿವೇಕ ಇರಲಿಲ್ಲ. ಇದರಿಂದ ರಾಜ್ಯ ಸಂರಕ್ಷಿಸುವುದರ ಬದಲಾಗಿ ಔರಂಗಜೇಬನ ದಾಳಿಗೆ ತುತ್ತಾಗಿ ಕೊಲ್ಲಲ್ಪಟ್ಟನು. ಆತನ ಪತ್ನಿ ಹಾಗೂ ಚಿಕ್ಕ ಮಗ ಶಾಹುನನ್ನು ಸೆರೆಹಿಡಿಯಲಾಯಿತು.ಹೀಗಾಗಿ ರಾಜಾರಾಮ ಶಾಹು (ಸಂಬಾಜಿಯ ಪುತ್ರ) ರಾಜ ಪ್ರತಿನಿಧಿಯಾಗಿ ಆಡಳಿತ ಸೂತ್ರ ವಹಿಸಿಕೊಂಡನು. ಪುನ: ರಾಜಾರಾಮ ಮೊಗಲರೊಂದಿಗೆ ಹೋರಾಟ ಮಾಡಿ ಗುಜರಾತ, ಮಾಳ್ವ, ಖಾನ್‌ದೇಶ ಮತ್ತು ಬಿರಾರ್ ಗಳನ್ನು ಮತ್ತು ಕೆಲವು ಕೋಟೆಗಳನ್ನು ವಶಪಡಿಸಿಕೊಂಡನು. ರಾಜಾರಾಮ ಕ್ರಿ.ಶ 1700ರಲ್ಲಿ ಮರಣ ಹೊಂದಿದ್ದರಿಂದ ಆತನ ಪತ್ನಿ ತಾರಾಬಾಯಿ ಮೋಹಿತೆ ತನ್ನ ಹತ್ತು ವರ್ಷದ ಮಗ 2ನೇ ಶಿವಾಜಿಯನ್ನು ಪಟ್ಟಕ್ಕೇರಿಸಿ ಅಧಿಕಾರ ಪ್ರಾರಂಭಿಸಿದಳು. ಇವಳು ಕ್ರಿ.ಶ 1700 ರಿಂದ 1708 ರವರೆಗೆ ರಾಜಪ್ರತಿನಿಧಿಯಾಗಿ ಕಾರ್ಯನಿರ್ವಹಿಸಿದಳು. ಇವಳು ಸಹ ಔರಂಗಜೇಬನೊಂದಿಗೆ ಯುದ್ಧ ಪ್ರಾರಂಭಿಸಿದಳು.

ಪ್ರಾರಂಭದಲ್ಲಿ ಮೊಘಲರು ವಿಜಯಶಾಲಿಗಳಾದರೆ ನಂತರ ಮರಾಠರು ತಾವು ಕಳೆದುಕೊಂಡಿದ್ದ ಕೋಟೆಗಳನ್ನು ಪುನ: ವಶಪಡಿಸಿಕೊಂಡರು.

ಔರಂಗಜೇಬನ ಉತ್ತರಾಧಿಕಾರಿಯಿಂದ ಒಂದನೇಯ ಬಹದ್ದೂರ ಶಾ ಸಂಬಾಜಿಯ ಪುತ್ರ ಶಾಹುನನ್ನು ಬಂಧನದಿಂದ ಬಿಡುಗಡೆಗೊಳಿಸಿ ದಕ್ಷಿಣದಲ್ಲಿದ್ದ ಮೊಘಲರ ಸುಭಾಗಳಾದ ಚೈತ್ ಮತ್ತು ಸರದೇಮುಖಿಗಳನ್ನು ಸಂಗ್ರಹಿಸುವ ಅನುಮತಿ ನೀಡಿದನು. ಇದು ತಾರಾಬಾಯಿ ಮತ್ತುಶಾಹುನ ನಡುವೆ ಅಂತರಿಕ ಕಲಹಕ್ಕೆ ಕಾರಣವಾಗಿ ತಾರಾಬಾಯಿ ಪರಾಭವಗೊಂಡಳು. ಆದರೆ ಶಾಹು ಸಹ ಸಾಮರ್ಥ್ಯ ಹೊಂದಿರಲಿಲ್ಲ.

ಇದರಿಂದಾಗಿ ತನ್ನ ಆಡಳಿತವನ್ನು ಪೇಶ್ವೆಗೆ ಬಿಟ್ಟುಕೊಡಬೇಕಾಯಿತು. ಹೀಗೆ ಮರಾಠ ರಾಜ್ಯದಲ್ಲಿ ಪೇಶ್ವೆಯವರ ಆಡಳಿತ ಪ್ರಾರಂಭವಾಯಿತು.

ಛತ್ರಪತಿ ಶಿವಾಜಿ ಮಹಾರಾಜರ ಹೆಸರು ಭಾರತದ ಚರಿತ್ರೆಯಲ್ಲಿ ಅಜರಾಮರವಾಗಿ ಅಗ್ರಪಂಥಿಯಲ್ಲಿ ನಿಲ್ಲುತ್ತದೆ. ಸ್ವಾಭಿಮಾನಿ ಹಿಂಧೂ ರಾಷ್ಟ್ರ ನಿರ್ಮಾಣಕ್ಕಾಗಿ ಹೋರಾಡಿದ ಛತ್ರಪತಿ ಶಿವಾಜಿ ಮಹಾರಾಜರು ಹಿಂದೂಸ್ಥಾನವನ್ನು ಒಗ್ಗೂಡಿಸಲು ಬಹುವಾಗಿ ಶ್ರಮಿಸಿದರು. ಶಿವಾಜಿಯ ಧೈರ್ಯ ಶೌರ್ಯ ಸಾಹಸ ರಾಷ್ಟ್ರಭಕ್ತಿ ಆಡಳಿತಗಾರರಿಗೆ ಎಂದೆಂದಿಗೂ ಪ್ರೇರಣದಾಯಕ.ತನ್ನ ದೇಹದಲ್ಲಿ ಕೊನೆ ಉಸಿರು ಇರುವವರೆಗೂ ರಾಮದಾಸರ ಮಾತಿನಂತೆ, ಅಂಬಾಭವಾನಿಯ ಆಜ್ಞೆಯಂತೆ ಧರ್ಮಗಳನ್ನು ಆದರಿಸುತ್ತಿದ್ದ ಮೊಘಲರು ಮತ್ತು ದಖನ್ನಿನ ಸುಲ್ತಾನರೊಡನೆ ಹೋರಾಡಿ ಮಹಾರಾಷ್ಟ್ರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಹಿಂದೂ ಸಾಮ್ರಾಜ್ಯವನ್ನು ಕಟ್ಟಿ, ಹಿಂದೂಧರ್ಮವನ್ನು ಪೋಷಿಸಿದ ಕೀರ್ತಿ,ಗೌರವ ಛತ್ರಪತಿ ಶಿವಾಜಿ ಮಹಾರಾಜರು ಅದಲ್ಲದೇ ತನ್ನ ಸೈನಿಕರಿಗೆ ಮಸೀದೆಗಳನ್ನು ಹಾಳು ಮಾಡಬಾರದು, ಖುರಾನನ್ನು ನಾಶ ಮಾಡಬಾರದು ಮತ್ತು ಪರಸ್ತ್ರೀಯರನ್ನು ಗೌರವದಿಂದ ಕಾಣಬೇಕು.

ಹೀಗೆ ಶಿವಾಜಿ ಮಹಾರಾಜರು ಒಬ್ಬ ಮಹಾಪುರುಷ, ಶೀಲ, ಸಚ್ಚಾರಿತ್ರಗಳಿಂದ ಧಾರ್ಮಿಕ ಮನೋಭಾವನೆಗಳಿಂದಾಗಿ ಶುದ್ಧ ಸದಾಚಾರಗಳಿಂದ ಪ್ರಜಾರಾಜನಾದ ಹಾಗೂ ರಾಜರ ರಾಜನಾದ.

ಜೈ ಶಿವಾಜಿ ಮಹಾರಾಜ, ಜೈ ಅಂಬಾಭವಾನಿ

**–ಸಂಗ್ರಹ**

# ಹಾನಗಲ್ ಸಮೂಹ ಸಂಪನ್ಮೂಲ ಕೇಂದ್ರಕ್ಕೆ ಶಾಸಕ ಶ್ರೀನಿವಾಸ ಮಾನೆ ದಿಢೀರ್ ಭೇಟಿ



ಹಾನಗಲ್: ಇಲ್ಲಿನ ಶಾಸಕರ ಸರ್ಕಾರಿ ಮಾದರಿ ಶಾಲೆ, ಕ್ಷೇತ್ರ ಸಮೂಹ ಸಂಪನ್ಮೂಲ ಕೇಂದ್ರ, ಮಲ್ಲಿಗಾರ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಹಾಗೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಶಾಸಕ ಶ್ರೀನಿವಾಸ ಮಾನೆ ಮಂಗಳವಾರ ದಿಢೀರ್ ಭೇಟಿ ನೀಡಿ, ಸಮಯ ಮತ್ತು ಕರ್ತವ್ಯ ಪಾಲನೆ ಮಾಡದ ಅಧಿಕಾರಿ, ಉಪನ್ಯಾಸಕ, ಸಿಬ್ಬಂದಿ ಮತ್ತು ಶಿಕ್ಷಕರ ಚಳಿ ಬಿಡಿಸಿದರು.

ಮೊದಲಿಗೆ ಕ್ಷೇತ್ರ ಸಮೂಹ ಸಂಪನ್ಮೂಲ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಬಿ.ಆರ್.ಪಿ.ಗಳು ಅನಧಿಕೃತವಾಗಿ ಗೈರಾಗಿರುವುದು, ಗಂಟೆ 10.45 ಆದರೂ ಕರ್ತವ್ಯಕ್ಕೆ ಹಾಜರಾಗದೇ ಇರುವುದಕ್ಕೆ ಗರಂ ಆದರು. ಓರ್ವ ಪ್ರೋಗ್ರಾಂರ ಹಾಗೂ ಸಹಾಯಕ ಲೆಕ್ಕಿಗರೂ ಸಹ ಅನಧಿಕೃತವಾಗಿ ಗೈರಾಗಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಹಾಜರಿ ಪುಸ್ತಕದಲ್ಲಿ ನಮೂದಿಸಿ, ಕರ್ತವ್ಯ ಲೋಪ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಸಭೆ, ಸಮಾರಂಭಗಳ ನೆಪದಲ್ಲಿ ವೈಯಕ್ತಿಕ ಕೆಲಸ, ಕಾರ್ಯಗಳಲ್ಲಿ ತೊಡಗುವುದು ಸರಿಯಲ್ಲ. ಇಂಥ ಹ ಬೆಳವಣಿಗೆಗಳನ್ನು ಸಹಿಸುವುದಿಲ್ಲ. ದೇಶದ ಭವಿಷ್ಯಕ್ಕೆ ಭದ್ರ ಅಡಿಪಾಯ ಹಾಕಬೇಕಿರುವ ಶಿಕ್ಷಣ ಇಲಾಖೆಯಲ್ಲಿ ಯಾವುದೇ ಕಾರಣಕ್ಕೂ ಅಶಿಸ್ತು ಸಹಿಸುವುದಿಲ್ಲ ಎಂದು ಎಚ್ಚರಿಸಿದರು.

ಇದಕ್ಕೂ ಮೊದಲು ಶಾಸಕರ ಸರ್ಕಾರಿ ಮಾದರಿ ಶಾಲೆಗೆ ಭೇಟಿ ನೀಡಿ ಶಿಕ್ಷಕರ ಹಾಜರಾತಿ ಪುಸ್ತಕ ಪರಿಶೀಲಿಸಿದರು. ವಿದ್ಯಾರ್ಥಿಗಳು ಶಾಲೆಗೆ ತಡವಾಗಿ ಆಗಮಿಸುತ್ತಿರುವುದನ್ನು ಗಮನಿಸಿ, ಪಾಲಕರ ಸಭೆ ಕರೆದು ಸಮಯಪಾಲನೆಗೆ ಸೂಚಿಸಿ. ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ಆಗಮಿಸಬೇಕು. ಶಿಕ್ಷಕರು ಅವರಿಗಿಂತ ಮೊದಲೇ ಹಾಜರಿರಬೇಕು ಎಂದರು.

ಬಳಿಕ ಅಡುಗೆ ಕೊಠಡಿಗೆ ತೆರಳಿ ಆಹಾರ ಸಾಮಗ್ರಿಗಳ ಸಂಗ್ರಹ ಪುಸ್ತಕ ಪರಿಶೀಲಿಸಿದರು. ವಿದ್ಯಾರ್ಥಿಗಳಿಗೆ ಸಮರ್ಪಕ ಪ್ರಮಾಣ ದಲ್ಲಿ ಹಾಲು ವಿತರಿಸಬೇಕು. ಶುಚಿ, ರುಚಿ ಬಿಸಿಯೂಟಕ್ಕೆ ಕಾಳಜಿ ವಹಿಸಬೇಕು ಎಂದು ಶ್ರೀನಿವಾಸ ಮಾನೆ ಸೂಚಿಸಿದರು.

ಬಳಿಕ ಮಲ್ಲಿಗಾರ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಭೇಟಿ ನೀಡಿ ಹಾಜರಾತಿ ಪುಸ್ತಕ ಪರಿಶೀಲಿಸಿದಾಗ ಶಿಕ್ಷಕರು ಮಧ್ಯಾಹ್ನದ ಸಹಿಯನ್ನು ಸಹ ಬೆಳಗ್ಗೆಯೇ ಹಾಕಿರುವುದಕ್ಕೆ ಪ್ರಶ್ನಿಸಿದರು.

ಬಹುತೇಕ ವಿದ್ಯಾರ್ಥಿಗಳು ಶೂ, ಸಾಕ್ಸ್ ಧರಿಸದೇ ಆಗಮಿಸುವುದನ್ನು ಗಮನಿಸಿ ಕಡ್ಡಾಯವಾಗಿ ವಿದ್ಯಾರ್ಥಿಗಳು ಶೂ, ಸಾಕ್ಸ್ ಧರಿಸಬೇಕು. ಶಿಸ್ತು, ಸ್ವಚ್ಛತೆಗೆ ಒತ್ತು ನೀಡಬೇಕು. ಶಿಕ್ಷಕರು ತಮ್ಮ ರಕ್ತ ಸಂಬಂಧಿಗಳಿಂದ ಶಾಲಾ ಕೆಲಸ ನಿರ್ವಹಿಸಬಾರದು. ಕರ್ತವ್ಯ ಪಾಲನೆಗೆ ಮುಂದಾಗುವಂತೆ ಸೂಚಿಸಿದರು.

ಕೊನೆಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಭೇಟಿ ನೀಡಿ ಸಿಬ್ಬಂದಿ ಹಾಜರಿ ಪುಸ್ತಕ ಪರಿಶೀಲಿಸಿದರು. ಕಾಲೇಜಿನ ಆಡಳಿತ ವಿಷಯಗಳ ಕುರಿತು ಉಪನ್ಯಾಸಕರು ಸಮರ್ಪಕ ಮಾಹಿತಿ ನೀಡಲು ತಡವರಿಸಿದಾಗ ಪ್ರಾಚಾರ್ಯರ ಅನುಪಸ್ಥಿತಿಯಲ್ಲಿ ಸಮರ್ಪಕ ಮಾಹಿತಿ ನೀಡಬೇಕು. ಇತ್ತೀಚಿನ ಕಾಲೇಜಿನಲ್ಲಿ ವಿದ್ಯಾರ್ಥಿಗಳ ದಾಖಲಾತಿ ಗಣನೀಯವಾಗಿ ಕುಸಿಯುತ್ತಿದೆ. ಇದಕ್ಕೆ ಏನು ಕಾರಣ? ಎಂದು ಪ್ರಶ್ನಿಸಿ, ದಾಖಲಾತಿ ಹೆಚ್ಚಿಸಲು ಪ್ರಾಮಾಣಿಕವಾಗಿ ಕಾಳಜಿ ವಹಿಸಿ ಎಂದು ಸೂಚಿಸಿದರು.

## ಫೆ.20, 21 ಮತ್ತು 22 ರಂದು ಜಿಂದಾಲ್‌ನಲ್ಲಿ ಬೃಹತ್ ರಕ್ತದಾನ ಶಿಬಿರ

# 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರು ಸ್ವಯಂ ಪ್ರೇರಿತ ರಕ್ತದಾನ ಮಾಡಿ: ಜಿಲ್ಲಾಧಿಕಾರಿ



ಬಳ್ಳಾರಿ : ಜಿಲ್ಲೆಯ ಸಂಡೂರು ತಾಲ್ಲೂಕಿನ ತೋರಣಗಲ್ಲು ಬಳಿಯ ಜೆಎಸ್‌ಡಬ್ಲ್ಯೂ ಸಂಸ್ಥೆ ವತಿಯಿಂದ ಜಿಂದಾಲ್ ನ ವಿವಿಧ 10 ಸ್ಥಳಗಳಲ್ಲಿ ಬೃಹತ್ ರಕ್ತದಾನ ಶಿಬಿರ ಏರ್ಪಡಿಸಲಾಗಿದ್ದು, 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬ ಅರ್ಹರು ಸ್ವಯಂ ಪ್ರೇರಿತ ರಕ್ತದಾನ ಮಾಡುವಂತೆ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ಅವರು ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬೃಹತ್ ರಕ್ತದಾನ ಶಿಬಿರ ಆಯೋಜನೆ ಕುರಿತಂತೆ ಆರೋಗ್ಯಾಧಿಕಾರಿಗಳ ಜೊತೆ ಏರ್ಪಡಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ಮನುಷ್ಯ ಬದುಕಿರುವಾಗ ದಾನ ಮಾಡಬಹು ದಾದಂತ ವಸ್ತು ರಕ್ತ. 18 ವರ್ಷ ಮೇಲ್ಪಟ್ಟ ಎಲ್ಲ ಅರ್ಹ ಪುರುಷ ಮತ್ತು ಮಹಿಳೆ ರಕ್ತದಾನ ಮಾಡುವ ಮೂಲಕ ಜಿಲ್ಲೆಯಲ್ಲಿ ರಕ್ತದ ಕೊರತೆಯನ್ನು ನೀಗಿಸಲು ಇದೇ ಫೆಬ್ರವರಿ 20, 21, 22 ರಂದು ಜಿಂದಾಲ್‌ನಲ್ಲಿ ಜರಗುವ ಬೃಹತ್ ರಕ್ತದಾನ ಶಿಬಿರದಲ್ಲಿ ಭಾಗವಹಿಸಿ ತಪ್ಪದೇ ರಕ್ತದಾನ ಮಾಡಿ ಶಿಬಿರ ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

ರಕ್ತದಾನ ಮಾಡುವುದರಿಂದ ದಾನಿಗಳ ದೇಹದಲ್ಲಿ ಹೊಸ ಚೈತನ್ಯ ಉಂಟು ಮಾಡಲು ಅನುವು ಮಾಡಿದಂತಾಗುತ್ತದೆ. ರಕ್ತದಾನದ ಮಹತ್ವ ಸ್ಮರಿಸಲು ವ್ಯಾಪಕ ಪ್ರಚಾರ ನೀಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಮಾತನಾಡಿ, ರಕ್ತದಾನ ಮಾಡುವುದರಿಂದ ಪ್ರತಿದಿನ ಅಪಘಾತಗಳಿಂದ ಗಾಯಗೊಂಡವರಿಗೆ ಹಾಗೂ ರಕ್ತಹೀನತೆಯಿಂದ ಬಳಲುವ ಗರ್ಭಿಣಿ ಯರಿಗೆ, ಹೆರಿಗೆ ಸಂದರ್ಭದಲ್ಲಿ ಗರ್ಭಿಣಿಯರಿಗೆ ಮತ್ತು ತಲಸಿಮಿಯಾದಂತ ಕಾಯಿಲೆಯಿಂದ ಬಳಲುತ್ತಿರುವವರಿಗೆ ನಿರಂತರವಾಗಿ ರಕ್ತದ ಅವಶ್ಯಕತೆ ನೀಗಿಸಲು ಸಹಕಾರಿಯಾಗಲಿದೆ ಎಂದು ಹೇಳಿದರು.

ರಕ್ತದಾನ ಮಾಡುವುದರಿಂದ ನಮ್ಮ ದೇಹದಲ್ಲಿ ಹೊಸ ರಕ್ತ ಉತ್ಪತ್ತಿಗೆ ನಿರಂತರವಾಗಿ ಸಹಕಾರಿ ಯಾಗಲಿದೆ. ಹಾಗಾಗಿ ಅರ್ಹ ಪ್ರತಿಯೊಬ್ಬ ಪುರುಷರು ಮೂರು ತಿಂಗಳಿಗೊಮ್ಮೆ, ಮಹಿಳೆ ನಾಲ್ಕು ತಿಂಗಳಿಗೊಮ್ಮೆ ರಕ್ತದಾನ ಮಾಡುವ ಮೂಲಕ ಮಾನವೀಯತೆಯ ಮೌಲ್ಯ ಅಳವಡಿಸಿಕೊಳ್ಳಬೇಕು ಎಂದರು.

*5000 ಯುನಿಟ್ ರಕ್ತ ಸಂಗ್ರಹಕ್ಕೆ ಗುರಿ:*-ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ನಿರ್ವಹಣಾ ಘಟಕ ಇವರೊಂದಿಗೆ ತೋರಣಗಲ್ಲು ನ ಜೆಎಸ್‌ಡಬ್ಲ್ಯು ಜಿಂದಾಲ್ ಇವರ ಸಹಯೋಗದಲ್ಲಿ ಜಿಂದಾಲ್ ಆವರಣದ ವಿವಿಧ 10 ಸ್ಥಳಗಳಲ್ಲಿ ರಕ್ತ ಭಂಡಾರ (ಬ್ಲಡ್‌ಬ್ಯಾಂಕ್) ಮೂಲಕ ಬೃಹತ್ ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದ್ದು, ಒಟ್ಟು 5000 ಕ್ಕೂ ಹೆಚ್ಚು ಯುನಿಟ್ ರಕ್ತ ಸಂಗ್ರಹಿಸಲು ಗುರಿ ಹೊಂದಲಾಗಿದೆ. ಶಿಬಿರದಲ್ಲಿ 09 ರಕ್ತ ಕೇಂದ್ರಗಳು ಭಾಗವಹಿಸಲಿವೆ ಎಂದು ಅವರು ತಿಳಿಸಿದರು.

*ರಕ್ತದಾನ ಶಿಬಿರ ನಡೆಯುವ ಸ್ಥಳ:*-ಜಿಂದಾಲ್‌ನ ಓಪಿಜೆ ಸೆಂಟರ್‌ನ ತಮನ್ನಾ ಶಾಲೆ, ಜಿಂದಾಲ್ ಸಂಜೀವಿನಿ ಆಸ್ಪತ್ರೆ, ವಿದ್ಯಾನಗರದ ಆರೋಗ್ಯ ಕೇಂದ್ರ ಮತ್ತು ಲಿಟಲ್ ಎಲ್ಲೆ, ಹೆಚ್‌ಎಸ್‌ಟಿ ಕಾಂಪ್ಲೆಕ್ಸ್, ಸಿಆರ್‌ಎಂ-1 ಪ್ಲಾಂಟ್, ಲಾಜಿಸ್ಟಿಕ್ ಪ್ಲಾಂಟ್, ಎಸ್‌ಎಂಎಸ್-4 ಪ್ಲಾಂಟ್, ಹೆಚ್‌ಆರ್‌ಡಿ ಪ್ಲಾಂಟ್, ಜೆಎಸ್‌ಎಂಎಸ್‌ಹೆಚ್‌ನ ಸ್ಟೆಪ್‌ಡೌನ್ ಐಸಿಯು ಮತ್ತು ಜೆಎಸ್‌ಡಬ್ಲ್ಯೂ ಎನರ್ಜಿ ಸಭಾಂಗಣದಲ್ಲಿ ಬೆಳಿಗ್ಗೆ 09 ಗಂಟೆಯಿಂದ ಸಂಜೆ 04.30 ಗಂಟೆಯವರೆಗೆ ನಡೆಯಲಿದೆ.

*ಇಲ್ಲಿ ಸಾರ್ವಜನಿಕರಿಗೆ ಅವಕಾಶ:*-ತೋರಣಗಲ್ಲು ನ ಓಪಿಜೆ ಜಿಂದಾಲ್ ತಮನ್ನಾ ಶಾಲೆ ಆವರಣ ಮತ್ತು ಜಿಂದಾಲ್ ಸಂಜೀವಿನಿ ಆಸ್ಪತ್ರೆ ಆವರಣ ಸೇರಿ ಈ ಎರಡು ಸ್ಥಳದಲ್ಲಿ ಸಾರ್ವಜನಿಕರಿಗೆ ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡಲು ಅವಕಾಶವಿದ್ದು, ಮೂರು ದಿನಗಳ ಕಾಲ ತಪ್ಪದೇ ಆಗಮಿಸಿ ರಕ್ತದಾನ ಮಾಡಬಹುದು ಎಂದು ತಿಳಿಸಿದರು.

ನೋಂದಣಿಗಾಗಿ ಮೊ.7829012277, 8039542124, 08395-42222, 9945367894, 9686595215 ಗೆ ಕರೆ ಮಾಡಿ ನೋಂದಾಯಿಸಿ ಕೊಳ್ಳಬಹುದು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ.ವಿ., ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಜಿಲ್ಲಾ ಡ್ಯಾಪ್ಕೋ ಮೇಲ್ವಿಚಾರಕ ಗಿರೀಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

-1ನೇ ಪುಟದಿಂದ......

## ಗಡುವು: ಸಿದ್ದರಾಮಯ್ಯ ಖಡಕ್ ಸೂಚನೆ

ಕಂದಾಯ ಕಟ್ಟದಿರುವುದರಿಂದ ಇಷ್ಟೆಲ್ಲಾ ಸಮಸ್ಯೆಗಳಾಗಿವೆ. ಒಂದು ಬಾರಿ, ಇದೊಂದು ಬಾರಿ ಬಿ ಖಾತಾ ಕೊಟ್ಟು ಅಂತ್ಯ ಹಾಡ್ತೀವಿ. ನಿಮಗೆ 3 ತಿಂಗಳು ಮಾತ್ರ ಟೈಮ್ ಕೊಟ್ಟಿದ್ದೀವಿ. ಇಷ್ಟರೊಳಗೆ ಅಭಿಯಾನ ನಡೆಸಿ ಪೂರ್ಣಗೊಳಿಸಿ ಎಂದು ಖಡಕ್ ಆಗಿ ಸೂಚಿಸಿದರು.

ಈ ಬಗ್ಗೆ ಯಾವುದೇ ರಾಜಿ ಇಲ್ಲ. ಅಧಿಕಾರಿಗಳು ರಾಜಿ ಮಾಡಿಕೊಂಡರೆ ಸಹಿಸಲ್ಲ. ಅನಧಿಕೃತ ಬಡಾವಣೆಗಳು ಮತ್ತೆ ತಲೆ ಎತ್ತಿದರೆ ಜಿಲ್ಲಾಧಿಕಾರಿ, ಮುಖ್ಯ ಅಧಿಕಾರಿ, ನಗರ ಯೋಜನಾ ಅಧಿಕಾರಿಗಳು ಜವಾಬ್ದಾರಿ ಆಗ್ತೀರಿ. ನಿಮ್ಮ ಮೇಲೆ ಮುಲಾಜಿಲ್ಲದೆ ಕ್ರಮ ತಗೋತೀವಿ ಎಂದು ಎಚ್ಚರಿಕೆ ನೀಡಿದರು.

ಬಜೆಟ್‌ನಲ್ಲಿ ರೈತರಿಗೆ ಸಿಗುತ್ತಾ ಬಂಪರ್ ಕೊಡುಗೆ ನಾನು ಸದಾ ರೈತ ಪರವಾಗಿ ಇರ್ತೇನೆ ಎಂದು ಸಿದ್ದರಾಮಯ್ಯ ಅಭಯ

ಮಧ್ಯವರ್ತಿಗಳಿಗೆ, ಬ್ರೋಕರ್ ಗಳಿಗೆ ತಕ್ಷಣ ಗೇಟ್ ಪಾಸ್ ಕೊಡಿ!

ಕಂದಾಯ ಇಲಾಖೆಯ ಕಚೇರಿಗಳಲ್ಲಿ ಮಧ್ಯವರ್ತಿಗಳಿಗೆ, ಬ್ರೋಕರ್ ಗಳಿಗೆ ತಕ್ಷಣ ಗೇಟ್ ಪಾಸ್ ಕೊಡಿ. ಇದನ್ನು ಮತ್ತು ಕಾಯ್ದೆಯ ದೂರದೃಷ್ಟಿಯನ್ನು ನೀವೆಲ್ಲರೂ ಸ್ಪಷ್ಟವಾಗಿ, ಖಚಿತವಾಗಿ ಅರ್ಥ ಮಾಡಿಕೊಳ್ಳಿ ಎಂದು ತಿಳಿಸಿದರು.

ರಾಜ್ಯದಲ್ಲಿ ಇನ್ನೆಲ್ಲೂ ಅನಧಿಕೃತ ಬಡಾವಣೆಗಳು, ರೆವಿನ್ಯೂ ಬಡಾವಣೆಗಳು ತಲೆ ಎತ್ತಬಾರದು. ಅನಧಿಕೃತ , ರೆವಿನ್ಯೂ ಬಡಾವಣೆಗಳಲ್ಲಿ ಸೈಟು, ಮನೆ ಕಟ್ಟಿರುವವರಿಗೆ ತೊಂದರೆ ಆಗಬಾರದು.

ಒಟ್ಟಾರೆಯಾಗಿ ಬಡವರು, ಮಧ್ಯಮ ವರ್ಗದವರಿಗೆ ಅನುಕೂಲ ಮಾಡಿಕೊಡಲು ಒಂದು ಹಂತದ ಪರಿಹಾರ ಕೊಟ್ಟಿದ್ದೀವಿ. 3 ತಿಂಗಳಲ್ಲಿ ಎಲ್ಲರಿಗೂ ಖಾತಾ ನೀಡಿ ಅಂತ್ಯ ಹಾಡಿ ಎಂದು ಸೂಚಿಸಿದರು.

ನಾನು ಮತ್ತು ಸಂಬಂಧಪಟ್ಟ ಎಲ್ಲಾ ಸಚಿವರೂ ಸ್ಪಷ್ಟಪಡಿಸಿದ್ದೀವಿ. ಹೊಸ ಗೊಂದಲಗಳಿಗೆ, ಗೊಂದಲಗಳಿಗೆ ಅವಕಾಶ ಮಾಡಿಕೊಡಬೇಡಿ. ಬಿ ಖಾತಾ ಇವತ್ತಿನಿಂದಲೇ ಕೊಡಲು ಶುರು ಮಾಡಿ ಎಂದು ತಿಳಿಸಿದರು.

## ಕಾವಲು ಕಾಯುವವರೇ ಪತ್ರಕರ್ತರು

ಅವರು ಹೇಳಿದರು. ಮಾಧ್ಯಮ ಪ್ರಪಂಚದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಅದರ ನಡುವೆಯೂ ಅನೇಕ ಮಾಧ್ಯಮಗಳು ವೃತ್ತಿಪರತೆ ಮರೆಯದೇ ಸಾಗುತ್ತಿರೋದು ಪ್ರಶಂಸಾರ್ಹ. ಇಂತಹ ಕಾರ್ಯಕ್ರಮಗಳು ಹೆಚ್ಚೆಚ್ಚು ಆಗುತ್ತಿರಬೇಕು. ದೇಶದ ವಿವಿಧ ರಾಜ್ಯಗಳಿಂದ ಬಂದ ನಿಮಗೆಲ್ಲ ಶುಭ ಹಾರೈಕೆಗಳು ಎಂದು ಹೇಳಿದ ಖಾದರ್ ನಿಮಗೆ ಸರ್ಕಾರದಿಂದ ಹೆಚ್ಚಿನ ಸಹಕಾರ ಸಿಗಬೇಕು. ಈ ವಿಚಾರದಲ್ಲಿ ನಾನು ಗಮನ ಹರಿಸುತ್ತೇನೆ ಎಂದು ಹೇಳಿದರು.

ಇಳಕಲ್ ಮಠದ ಶ್ರೀ ಮಹಾಂತೇಶ ಸ್ವಾಮೀಜಿ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಇಂಡಿಯನ್ ಜರ್ನಲೀಸ್ಟ್ ಯೂನಿಯನ್ ಅಧ್ಯಕ್ಷ ಕೆ ಪಿ ಪಂಡೀತ್, ಕರ್ನಾಟಕ ಪತ್ರಕರ್ತರ ಸಂಘದ ಅಧ್ಯಕ್ಷ ಮುರುಗೇಶ್ ಶಿವಪೂಜಿ, ಉಪಾಧ್ಯಕ್ಷರಾದ ಸುದೇಶ್ ಕುಮಾರ್ ಉಪಸ್ಥಿತರಿದ್ದರು.

ಹಾಗೂ ಈ ಒಂದು ರಾಷ್ಟ್ರೀಯ ಸಭೆಯಲ್ಲಿ ಬೇರೆಬೇರೆ ರಾಜ್ಯದ ಅಧ್ಯಕ್ಷರುಗಳು ಪತ್ರಿಕಾ ರಂಗದ ಸವಾಲುಗಳ ಬಗ್ಗೆ ವಿಚಾರ ವಿನಿಮಯ ಮಾಡಿದರು.ಸುಮಾರು 20 ರಾಜ್ಯಗಳಿಂದ ಬಂದ 250 ಪತ್ರಕರ್ತರು ಮದ್ಯಾನ್ಹ ದ ನಂತರ ಪ್ರಿಂಟ್ ಮೀಡಿಯಾ ಮತ್ತು ಡಿಜಿಟಲ್ ಮೀಡಿಯಾ ಎಂಬ ವಿಷಯ ದ ಬಗ್ಗೆ ನಡೆದ ಸಂವಾದದಲ್ಲಿ ಪಾಲ್ಗೊಂಡು, ನುರಿತ ಸೀನಿಯರ್ ಜರ್ನಲಿಸ್ಟ್‌ಗಳ ಅನುಭವದ ಮಾತುಗಳೊಂದಿಗೆ ಆ ದಿನದ ವಿಚಾರ ದಾರೆಗೆ ಪೂರ್ಣ ವಿರಾಮ.

ಈ ಸಂದರ್ಭದಲ್ಲಿ ವೈದ್ಯಕೀಯ (ಕಣ್ಣಿನ)ಕ್ಷೇತ್ರದಲ್ಲಿ ಸಾಧನೆ ಮಾಡಿದ್ದ ಹಿರಿಯ ಡಾಕ್ಟರ್ ಸುಬ್ಬಣ್ಣ ಶೆಟ್ಟಿ (81)ಅವರಿಗೆ ಐಎಗ ನ್ಯಾಷನಲ್ ಅಚೀವ್‌ಮೆಂಟ್ -2025 ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಪ್ರಿಯಾ ಸುದೇಶ್ ಕಾರ್ಯಕ್ರಮ ನಿರ್ವಹಣೆ ಮಾಡಿದರು. ಅದೇ ದಿನ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಗೋವಾ ರಾಜ್ಯದ ಮಾಜಿ ಮುಖ್ಯಮಂತ್ರಿ ದಿಗಂಬರ ಕಾಮತ್ ಮುಖ್ಯ ಅತಿಥಿಯಾಗಿ ಮಾತನಾಡಿದರು.

ವೇದಿಕೆಯಲ್ಲಿ ಅಂಕಲಿ ಮಠದ ಸ್ವಾಮೀಜಿ, ಗೋವಾ ಕನ್ನಡ ಸಂಘದ ಅಧ್ಯಕ್ಷ ಬಸವರಾಜ್ ಮೇಟಿ ಹಾಗೂ ಇನ್ನಿತರ ಪ್ರಮುಖರು ಉಪಸ್ಥಿತರಿದ್ದರು.

ಸಭೆಯಲ್ಲಿ ಭಾಗವಹಿಸಿದ ಹಿರಿಯ ಪತ್ರಕರ್ತರನ್ನು ಗೌರವಿಸಲಾಯಿತು.

-1ನೇ ಪುಟದಿಂದ.......

## ಸೋಲಾರ ವಿದ್ಯುತ್ ಉತ್ಪಾದನೆಗೆ ಒತ್ತು

ಸೋಲಾರ್ ವಿದ್ಯುತ್ ಉತ್ಪಾದನೆ ಮಾಡಿಕೊಳ್ಳಲು ಉದ್ದೇಶಿಸಿ ಇದನ್ನು ಪೈಲೆಟ್ ಕಾರ್ಯಕ್ರಮವಾಗಿ ರೂಪಿಸಲಾಗುತ್ತದೆ. ಪಂಚಾಯಿತಿಗಳು ಕುಡಿಯುವ ನೀರು ಪೂರೈಕೆ, ಬೀದಿದೀಪಗಳಿಗೆ ಅಗತ್ಯವಿರುವ ವಿದ್ಯುತ್‌ನ್ನು ಉತ್ಪಾದನೆ ಮಾಡಿಕೊಂಡು ಸ್ವಾವಲಂಬಿ ಯಾಗಬೇಕು. ಇದಕ್ಕಾಗಿ 400 ಎಕರೆ ಜಾಗವನ್ನು ಗುರುತಿಸಿ ಸೋಲಾರ್ ಪ್ಯಾನಲ್ ಅಳವಡಿಸಿ ಗ್ರಿಡ್‌ಗೆ ವಿದ್ಯುತ್ ನೀಡಿ ಅಷ್ಟೆ ವಿದ್ಯುತ್‌ನ್ನು ವಾಪಸ್ ನೀಡಲಾಗುತ್ತದೆ. ಇದರಿಂದ ವಿದ್ಯುತ್ ಉಳಿತಾಯವಾಗಲಿದೆ ಮತ್ತು ಪಂಚಾಯಿತಿಗಳ ಮೇಲಿನ ಆರ್ಥಿಕ ಹೊರೆ ಕಡಿಮೆಯಾಗಲಿದೆ ಎಂದರು.

ವಿದ್ಯುತ್ ದರ ಪರಿಷ್ಕರಣೆ ಕೆಇಆರ್‌ಸಿಗೆ; ಎಲ್ಲಾ ಎಸ್ಕಾಂಗಳ ವಿದ್ಯುತ್ ದರ ಏರಿಕೆಯ ನಿರ್ಧಾರವನ್ನು ಕೆಇಆರ್‌ಸಿಗೆಮಾಡಲಿದೆ. ಸಾರ್ವಜನಿಕರಿಂದ ಅಭಿಪ್ರಾಯಗಳನ್ನು ಪಡೆಯುವ ಮೂಲಕ ದರ ಏರಿಕೆ ನಿರ್ಣಯಗಳನ್ನು ಕೆಇಆರ್‌ಸಿ ನಿರ್ಧರಿಸಲಿದೆ. ಯಾರದೂ ಕೂಡ ಹಸ್ತಕ್ಷೇಪ ಇರುವುದಿಲ್ಲ, ಕಳೆದ ವರ್ಷ ಯಾವುದೇ ವಿದ್ಯುತ್ ದರ ಏರಿಕೆ ಮಾಡಿರುವುದಿಲ್ಲ ಎಂದು ಸಚಿವರು ಸ್ಪಷ್ಟಪಡಿಸಿದರು.

ಗೃಹಜ್ಯೋತಿ; ಸರ್ಕಾರದ ಗ್ಯಾರಂಟಿ ಯೋಜನೆಗಳೊಂದಾದ ಗೃಹಜ್ಯೋತಿ ಯೋಜನೆ ಎಲ್ಲಾ ವರ್ಗದ ಜನರಿಗೂ ಅನ್ವಯಿಸಲಿದ್ದು 200 ಯುನಿಟ್ ವರೆಗೆ ವಿದ್ಯುತ್ ಬಳಕೆಗೆ ಶೂನ್ಯ ಬಿಲ್ ನೀಡಲಾಗುತ್ತದೆ. ಇದನ್ನು ಅವರು ವರ್ಷದಲ್ಲಿ ಉಪಯೋಗಿಸುವ ಯುನಿಟ್ ಗಳನ್ನಾಧರಿಸಿ ಹೆಚ್ಚುವರಿಯಾಗಿ ಶೇ 10 ರಷ್ಟು ಸೇರಿಸಿ ಬಳಕೆಯ ಯುನಿಟ್ ನಿಗದಿಯಾಗುತ್ತದೆ. ಆದರೆ 200 ಯುನಿಟ್ ನಂತರ 1 ಯುನಿಟ್ ಹೆಚ್ಚಾದರೂ ವಿದ್ಯುತ್ ದರದಂತೆ ಬಿಲ್ ಪಾವತಿಸಬೇಕಾಗುತ್ತದೆ ಎಂದರು.

ದಾವಣಗೆರೆ ಜಿಲ್ಲೆಯಲ್ಲಿ ಗೃಹಜ್ಯೋತಿ ಯೋಜನೆಯಡಿ ನೊಂದಣಿಯಾದ 433897 ಆರ್.ಆರ್.ಸಂಖ್ಯೆಗಳಿದ್ದು ವಿದ್ಯುತ್ ಸಂಪರ್ಕ ಪಡೆದ ಸ್ಥಾವರಗಳಲ್ಲಿ ಶೇ 88.93 ರಷ್ಟು ಗೃಹಜ್ಯೋತಿಯಲ್ಲಿವೆ. ಈ ಸ್ಥಾವರಗಳಿಗೆ 2023 ರ ಆಗಸ್ಟ್ ನಿಂದ 2024 ರ ಡಿಸೆಂಬರ್ ಅಂತ್ಯದವರೆಗೆ 309 ಕೋಟಿಯಷ್ಟು ಹಣವನ್ನು ಗ್ರಾಹಕರಿಗೆ ಸಬ್ಸಿಡಿ ನೀಡಿದ್ದು ಸರ್ಕಾರ ಇದನ್ನು ಭರಿಸಿದೆ ಎಂದರು.

ರೈತರಿಗೆ 7 ಗಂಟೆ ವಿದ್ಯುತ್; ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ದಿನದಲ್ಲಿ 7 ಗಂಟೆಗಳ ಕಾಲ ತ್ರಿಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತದೆ. ದಾವಣಗೆರೆ ಜಿಲ್ಲೆ ಆನಗೋಡು, ಮಾಯಕೊಂಡ ಭಾಗದಲ್ಲಿ 3 ಅಥವಾ 4 ಗಂಟೆಗಳ ಕಾಲ ಮಾತ್ರ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ನೀಡಲಾಗುತ್ತದೆ ಎಂದು ಶಾಸಕರಾದ ಕೆ.ಎಸ್.ಬಸವಂತಪ್ಪ ಪ್ರಸ್ತಾಪಿಸಿದಾಗ ಎಲ್ಲಾ ರೈತರಿಗೂ ದಿನದಲ್ಲಿ 7 ಗಂಟೆಗಳ ಕಾಲ ವಿದ್ಯುತ್ ನೀಡುವುದು ಸರ್ಕಾರದ ನೀತಿಯಾಗಿದ್ದು ಅದರಂತೆ ಬೆಸ್ಕಾಂ ಕ್ರಮ ಕೈಗೊಳ್ಳಬೇಕು. ಓವರ್ ಲೋಡಿಂಗ್ ಆದರೆ ಅದನ್ನು ಬೇರೆಡೆ ವರ್ಗಾಯಿಸಿ 7 ಗಂಟೆ ಕೃಷಿ ಪಂಪ್‌ಸೆಟ್‌ಗೆ ವಿದ್ಯುತ್ ನೀಡಲೇಬೇಕೆಂದು ಸೂಚನೆ ನೀಡಿದರು.

ಪಂಪ್‌ಸೆಟ್‌ಗಳಿಗೆ ಶೀಘ್ರ ಸಂಪರ್ಕಕ್ಕೆ ಕ್ರಮ; ರೈತರ ಕೃಷಿ ಪಂಪ್‌ಸೆಟ್‌ಗಳಿಗೆ 2004 ರಿಂದಲೂ ಅಕ್ರಮ-ಸಕ್ರಮ ಎಂಬ ಕಾರ್ಯಕ್ರಮದಡಿ ಅನಧಿಕೃತ ಸಂಪರ್ಕವನ್ನು ಸಕ್ರಮ ಮಾಡುತ್ತಾ ಬರಲಾಗಿದೆ. ಇದರಡಿ ಮೂಲಭೂತ ಸೌಕರ್ಯದಡಿ ಮಾರ್ಗ, ಟಿಸಿ ಅಳವಡಿಕೆ ಮಾಡಲಾಗಿದೆ. ಬಾಕಿ ಇರುವ 4946 ಪಂಪ್‌ಸೆಟ್‌ಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಟೆಂಡರ್ ಕರೆಯಲಾಗಿದೆ. ರೈತರು ಸ್ವಂತವಾಗಿ ಮೂಲಭೂತ ಸೌಕರ್ಯ ಮಾಡಿಕೊಂಡು ಕೃಷಿ ಪಂಪ್‌ಸೆಟ್‌ಗಳಿಗೆ ತಕ್ಷಣವೇ ಸಂಪರ್ಕ ಪಡೆಯಲು ಹಾಗೂ ಇಲಾಖೆಯಿಂದ ಮೂಲಭೂತ ಸೌಕರ್ಯಕ್ಕಾಗಿ ಸರತಿಯಲ್ಲಿ ಕಾಯುವ ಎರಡು ಅವಕಾಶಗಳನ್ನು ಮಾಡಿ ಕೊಟ್ಟಲ್ಲಿ ಸ್ವಂತವಾಗಿ ಮಾಡಿಕೊಳ್ಳುವ ರೈತರಿಗೆ ಅನುಕೂಲವಾಗುತ್ತದೆ ಎಂಬ ಚಿಂತನೆ ಮಾಡಲಾಗಿದೆ ಎಂದರು.

ಕಸುಮ್-ಬಿ; ಕುಸುಮ್ ಬಿ ಯೋಜನೆಯಡಿ ರೈತರ ಪಂಪ್‌ಸೆಟ್‌ಗಳಿಗೆ ಸೋಲಾರ್ ವಿದ್ಯುತ್ ಸಂಪರ್ಕ ಕಲ್ಪಿಸುವುದಾಗಿದೆ. 7.5 ಹೆಚ್‌ಪಿ ವರೆಗೆ ಅವಕಾಶ ಇದ್ದು ರೈತರು ಶೇ 20 ರಷ್ಟು ವಂತಿಗೆಯನ್ನು ಕಟ್ಟಬೇಕು. ಕೇಂದ್ರ ಶೇ 30 ಹಾಗೂ ರಾಜ್ಯ ಶೇ 50 ರಷ್ಟು ಸಹಾಯಧನ ಘಟಕ ವೆಚ್ಚಕ್ಕೆ ನೀಡಲಿದೆ. ಮತ್ತು ಕುಸುಮ್-ಸಿ ಯೋಜನೆಯಡಿ ಖಾಸಗಿ ಹಾಗೂ ಸರ್ಕಾರಿ ಜಮೀನುಗಳಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆ ಮಾಡುವ ಮೂಲಕ ಗ್ರಿಡ್‌ಗೆ ಪೂರೈಕೆ ಮಾಡುವುದಾಗಿದೆ. ರೈತರು ಸೋಲಾರ್ ಪಂಪ್‌ಸೆಟ್ ಅಳವಡಿಕೆಗೆ ಮುಂದೆ ಬಂದಲ್ಲಿ ಹೆಚ್ಚು ಅನುಕೂಲವಾಗಲಿದೆ ಎಂದರು.

ಸಭೆಯಲ್ಲಿ ಶಾಸಕರಾದ ಕೆ.ಎಸ್.ಬಸವಂತಪ್ಪ, ಲತಾ ಮಲ್ಲಿಕಾರ್ಜುನ್, ಬಿ.ದೇವೇಂದ್ರಪ್ಪ, ಕೆಪಿಟಿಸಿಎಲ್ ಎಂಡಿ ಪಂಕಜ್‌ಕುಮಾರ್ ಪಾಂಡೆ, ಬೆಸ್ಕಾಂ ಎಂಡಿ ಡಾ; ಶಿವಶಂಕರ್ ಎನ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ.ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್, ಬೆಸ್ಕಾಂ ಅಧೀಕ್ಷಕ ಇಂಜಿನಿಯರ್ ಪಾಟೀಲ್ ಹಾಗೂ ಬೆಸ್ಕಾಂ, ಕೆಪಿಟಿಸಿಎಲ್ ಅಧಿಕಾರಿಗಳು ಉಪಸ್ಥಿತರಿದ್ದರು.

## ಕ್ರೀಡಾ ಪಂದ್ಯಾವಳಿಗಳ ಜಿಎಂ ಲೀಗ್ ಸಮಾರೋಪ

ಪ್ರವೀಣ್ ಜೆ., ಎಫ್‌ಬಿಸಿ ಮತ್ತು ಜಿಎಂಯು ಡೀನ್ ಡಾ. ಸಂತೋಷ್ ಕುಮಾರ್ ಬಿ.ಎಂ., ವಿದ್ಯಾರ್ಥಿಗಳ ವ್ಯವಹಾರಗಳ ನಿರ್ದೇಶನಾಲಯದ ನಿರ್ದೇಶಕರಾದ ಡಾ. ಹೆಚ್.ಎಸ್. ಕಿರಣ್ ಕುಮಾರ್, ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ನಿರ್ದೇಶಕರಾದ ಜಿ.ಬಿ. ಅಜ್ಜಯ್ಯ ಸೇರಿದಂತೆ ಪ್ರಾಂಶುಪಾಲರು, ವಿವಿಧ ವಿಭಾಗಗಳ ಡೀನ್‌ಗಳು, ನಿರ್ದೇಶಕರು, ಮುಖ್ಯಸ್ಥರುಗಳು, ಅಧ್ಯಾಪಕ ಮತ್ತು ಅಧ್ಯಾಪಕೇತರ ವರ್ಗದವರು, ಕ್ರೀಡಾ ಸಂಯೋಜಕರು,ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕುತೂಹಲ ಕೆರಳಿಸಿದ್ದ ಕ್ರಿಕೆಟ್ ಫೈನಲ್ ಪಂದ್ಯಾಟ : ಗೆದ್ದು ಬೀಗಿದ ಇನ್ವಿಸಿಬಲ್ ಲೆಜೆಂಡ್ಸ್ ಕ್ರಿಕೆಟ್ ನ ಫೈನಲ್ ಪಂದ್ಯಾಟವು ರೋಚಕವಾಗಿತ್ತು.

ಪ್ರಾರಂಭದಿಂದ ಹಿಡಿದು ಪಂದ್ಯದ ಕೊನೆಯಾಟದವರೆಗೂ ಕುತೂಹಲ ಉಂಟು ಮಾಡಿತ್ತು. ಜಿಎಂಯು ಎಫ್‌ಇಟಿ ಡೀನ್ ಡಾ. ಪ್ರವೀಣ್ ಜೆ. ಪ್ರಾಂಚೈಸತ್ವದ ವಿಕ್ಟರಿ ಹಂಟರ್ಸ್ ತಂಡ ಮತ್ತು ಎಫ್‌ಬಿಸಿ ಮತ್ತು ಜಿಎಂಯು ಡೀನ್ ಡಾ. ಸಂತೋಷ್ ಕುಮಾರ್ ಬಿ.ಎಂ. ಪ್ರಾಂಚೈಸತ್ವದ ಇನ್ವಿಸಿಬಲ್ ಲೆಜೆಂಡ್ಸ್ ತಂಡಗಳ ನಡುವೆ ಪಂದ್ಯಾಟದಲ್ಲಿ ಪೈಪೋಟಿ ಏರ್ಪಟ್ಟಿತ್ತು. ಮೊದಲಿಗೆ ಬ್ಯಾಟಿಂಗ್ ಗಿಳಿದ ವಿಕ್ಟರಿ ಹಂಟರ್ಸ್ ತಂಡವು 63 ರನ್ ಗಳ ಸಾಧಿಸಿತು. 64 ರನ್ ಗಳ ಗುರಿ ಬೆನ್ನತ್ತಿದ ಇನ್ವಿಸಿಬಲ್ ಲೆಜೆಂಡ್ಸ್ ತಂಡವು ಗುರಿಯನ್ನು ಒಂದು ರನ್ ಹೆಚ್ಚುವರಿಯಾಗಿಯೇ ಸಾಧಿಸಿ 65 ರನ್ ಗಳ ಮೂಲಕ ಭಾರೀ ಗೆಲುವಿನೊಂದಿಗೆ ಚಾಂಪಿಯನ್ ಟ್ರೋಫಿ ಮುಡಿಗೇರಿಸಿಕೊಂಡಿತು.

ಕೋ ಕೋ : ಪಾಯಿಂಟ್ ಹಂಟರ್ಸ್‌ಗೆ ಜಯ ಮಹಿಳೆಯರ ಕೋ ಕೋ ಫೈನಲ್ ಪಂದ್ಯಾಟದಲ್ಲಿ ಜಿಎಂಐಟಿ ಸಿಎಸ್‌ಇ ವಿಭಾಗದ ಹೆಚ್‌ಓಡಿ ಮತ್ತು ಪ್ರೊಫೆಸರ್ ಡಾ. ವೀರಪ್ಪ ಅವರ ಪ್ರಾಂಚೈಸಿಯ ಪಾಯಿಂಟ್ ಹಂಟರ್ಸ್ ತಂಡವು (6 ಅಂಕಗಳು) 2 ಅಂಕಗಳ ಮುನ್ನಡೆಯೊಂದಿಗೆ ರಾಪಿಡ್ ರೇಸರ್ಸ್ ತಂಡದ (4 ಅಂಕಗಳು) ವಿರುದ್ಧ ಗೆಲುವು ಸಾಧಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದೆ. ರಾಪಿಡ್ ರೇಸರ್ಸ್ ತಂಡ ರನ್ನರ್ ಅಪ್ ಆಗಿ ತೃಪ್ತಿ ಕಂಡಿದೆ.

ಥ್ರೋಬಾಲ್ : ಸರ್ವ್ಸ್ ಆವೆಂಜರ್ಸ್‌ಗೆ ಗೆಲುವು

ಥ್ರೋಬಾಲ್ ಫೈನಲ್ ಪಂದ್ಯಾಟದಲ್ಲಿ ಜಿಎಂ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಗಿರೀಶ್ ಬೋಳಕಟ್ಟಿ

ಪ್ರಾಂಚೈಸಿಯ ಸರ್ವ್ಸ್ ಆವೆಂಜರ್ಸ್ ತಂಡವು (17 ಅಂಕಗಳು) 2 ಅಂಕಗಳ ಮುನ್ನಡೆಯೊಂದಿಗೆ ಜಿಎಂಐಟಿ ಇ ಅಂಡ್

ಸಿ ಸಿಎಸ್ ಸಿ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ರೇವತಿ ಪ್ರಾಂಚೈಸಿಯ ಡೈನಾಮಿಕ್ ಡ್ರಾಗನ್ಸ್ ತಂಡದ (15

ಅಂಕಗಳು) ವಿರುದ್ಧ ಗೆಲುವು ಸಾಧಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಡೈನಾಮಿಕ್ ಡ್ರಾಗನ್ಸ್ ತಂಡವು ರನ್ನರ್ ಅಪ್ ಆಗಿ ತೃಪ್ತಿ ಕಂಡಿದೆ.

ವಾಲಿಬಾಲ್ : ಸೆಟ್ ಸ್ಟಾರ್ಸ್‌ಗೆ ಜಯ

ವಾಲಿಬಾಲ್ ಫೈನಲ್ ಪಂದ್ಯಾಟದಲ್ಲಿ ಜಿಎಂ ಪಾಲಿಟೆಕ್ನಿಕ್ ಸಹಾಯಕ ಪ್ರಾಧ್ಯಾಪಕರಾದ ಅಶೋಕ್ ಹೆಚ್.ಎಸ್. ಪ್ರಾಂಚೈಸತ್ವದ ಸೆಟ್ ಸ್ಟಾರ್ಸ್ ತಂಡವು (21 ಅಂಕಗಳು) 3 ಅಂಕಗಳ ಮುನ್ನಡೆಯೊಂದಿಗೆ ಓಜಿ ಸ್ಮ್ಯಾಷರ್ಸ್ ತಂಡದ

(18 ಅಂಕಗಳು) ವಿರುದ್ಧ ಜಯ ಸಾಧಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದೆ. ಓಜಿ ಸ್ಮ್ಯಾಷರ್ಸ್ ತಂಡ ರನ್ನರ್ ಅಪ್ ಆಗಿ ತೃಪ್ತಿ ಕಂಡಿದೆ.

# ಟ್ರೆಡಿಷನಲ್ ಶೋಟೋಕನ್ ಕರಾಟೆ ಅಕಾಡೆಮಿ ಕರಾಟೆ ಬ್ಲಾಕ್ ಬೆಲ್ಟ್ ಹಾಗೂ ಪ್ರಮಾಣ ಪತ್ರ ಪ್ರಧಾನ ಸಮಾರಂಭ




**ಬಳ್ಳಾರಿ :** ಬಳ್ಳಾರಿ ನಗರದ ಸತ್ಯಂ ಇಂಟರ್ನ್ಯಾಷನಲ್ ಸ್ಕೂಲ್, ಬಳ್ಳಾರಿ ಇವರ ಸಂಯುಕ್ತಆಶ್ರಯದಲ್ಲಿ ನಡೆದ ಟ್ರೆಡಿಷನಲ್ ಶೋಟೋಕನ್ ಕರಾಟೆ ಅಕಾಡೆಮಿ ಕರ್ನಾಟಕ(ರಿ) ಕರಾಟೆ ಬ್ಲಾಕ್ ಬೆಲ್ಟ್ ಹಾಗೂ ಪ್ರಮಾಣ ಪತ್ರ ಪ್ರಧಾನ ಸಮಾರಂಭವನ್ನು" ಮುಲ್ಲಂಗಿ ನಂದೀಶ್ ಮಹಾಪೌರರು ಮಹಾನಗರ ಪಾಲಿಕೆ ಬಳ್ಳಾರಿ ಇವರು ಉದ್ಘಾಟಿಸಿ ಉದ್ಘಾಟಕರ ನುಡಿಯನ್ನು ನುಡಿದು ಕರಾಟೆ ಎನ್ನುವುದು ಒಲಂಪಿಕ್ ಕ್ರೀಡೆಗಳಲ್ಲಿ ಅರ್ಹತೆಯನ್ನು ಪಡೆದು ಕೊಂಡಿದ್ದು ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಕೂಡ ಹೆಸರನ್ನು ಪಡೆದಿದೆ.. ಈ ಕ್ರೀಡೆಯನ್ನು ಕಲಿತು ಎಲ್ಲರೂ ಉತ್ತಮ ಕ್ರೀಡಾಪಟುಗಳಾಗಿ ಭಾರತಕ್ಕೆ ಪದಕವನ್ನು ಗೆಲ್ಲಬೇಕೆಂದು ತಿಳಿಸುತ್ತಾ ಇಲ್ಲಿ ಇರುವ ಮಕ್ಕಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ಇರುವುದು ನಿಜಕ್ಕೂ ಸಂತೋಷದ ಸಂಗತಿ ಮಹಿಳಾ ಸಬಲೀಕರಣದ ದೃಷ್ಟಿಯಿಂದ ಆತ್ಮ ರಕ್ಷಣಾ ದೃಷ್ಟಿಯಿಂದ ಅವರಿಗೆ ಕರಾಟೆ ತರಬೇತಿ ಅವಶ್ಯಕತೆ ಹೆಚ್ಚಿನ ಸಂಖ್ಯೆಯಲ್ಲಿ ಕರಾಟೆಯನ್ನು ತರಬೇತುದಾರರಲ್ಲಿ ಹೋಗಿ ಕಲಿತು ಒಳ್ಳೆಯ ಕರಾಟೆ ಪಟುಗಳಾಗಿ ಹೊರ ಹೊಮ್ಮಬೇಕು ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಸುರೇಖಾ ಚೇರ್ಮನ್ ಸತ್ಯಂ ಶಿಕ್ಷಣ ಸಂಸ್ಥೆ ಬಳ್ಳಾರಿ.. ಮುಖ್ಯ ಅತಿಥಿಗಳಾಗಿ ಸತೀಶ್ ಎನ್ ಪೊಲೀಸ್ ಇನ್ಸ್ಪೆಕ್ಟರ್ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆ, ಜಗದೀಶ್ ಕುಮಾರ್ ಕರೆಸ್ಪಾಂಡೆನ್ಸ್ ಮತ್ತು ಕಾರ್ಯದರ್ಶಿಗಳು ಸತ್ಯಂ ಶಿಕ್ಷಣ ಸಂಸ್ಥೆ ಬಳ್ಳಾರಿ, ಜಿ ಕೆ ಸ್ವಾಮಿ ಉದ್ಯಮಿಗಳು ಸಂಸ್ಥಾಪಕ ಅಧ್ಯಕ್ಷರು ಜಿಕೆ ಫೌಂಡೇಶನ್ ಬಳ್ಳಾರಿ, ಶ್ರೀಮತಿ ಭವನಾ ಪ್ರಸಾದ್ ಪ್ರಾಂಶುಪಾಲರು ಸತ್ಯಂ ಇಂಟರ್ನ್ಯಾಷನಲ್ ಸ್ಕೂಲ್ ಬಳ್ಳಾರಿ, ಪಿ ಶೇಖರ್ ರಾಜ್ಯಾಧ್ಯಕ್ಷರು ಕರ್ನಾಟಕ ಏಕೀಕರಣ ರಕ್ಷಣಾ ಸೇನ ಸಮಿತಿ ಬಳ್ಳಾರಿ ,ರಾಮಾಂಜನೇಯಲು ಉದ್ಯಮಿಗಳು ಹಾಗೂ ಸಮಾಜಸೇವಕರು ,ಸುರೇಶ್ ಅಧ್ಯಕ್ಷರು ಬಳ್ಳಾರಿ ಜಿಲ್ಲಾ ಕರಾಟೆ ಶಿಕ್ಷಕರ ಸಂಘ, ವರ್ದಿನಿ ಮೇಡಂ ಆಡಳಿತ ಅಧಿಕಾರಿಗಳು ಟ್ರೆಡಿಷನಲ್ ಶೋ ಟೋಕನ್ ಕರಾಟೆ ಅಕಾಡೆಮಿ ಕರ್ನಾಟಕ ಅತಿಥಿಗಳಾಗಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಪ್ರಸ್ತಾವಿಕ ನುಡಿಯನ್ನು ಸೆನ್ಸಾಯಿ ಕಟ್ಟೆಸ್ವಾಮಿ ಕರಾಟೆ, ತರಬೇತಿದಾರರು ಹಾಗೂ ಸಂಸ್ಥಾಪಕ ಅಧ್ಯಕ್ಷರು ನುಡಿದರು. ಅದೇ ರೀತಿಯಾಗಿ ಸೆನ್ಸಾಯಿ ಸುಭಾಷ್ ಚಂದ್ರ ಎಂ ಕರಾಟೆ ತರಬೇತಿದಾರರು ಹಾಗೂ ತಾಂತ್ರಿಕ ನಿರ್ದೇಶಕರು ಬ್ಲಾಕ್ ಬೆಲ್ಟ್ ಪ್ರಶಸ್ತಿ ವಿತರಣಾ ಸಮಾರಂಭವನ್ನು ನಡೆಸಿಕೊಟ್ಟರು..

ಕಾರ್ಯಕ್ರಮದಲ್ಲಿ 400 ಕ್ಕಿಂತ ಹೆಚ್ಚು ಮಕ್ಕಳಿಗೆ ಬೆಲ್ಟ್ ಮತ್ತು ಪ್ರಶಸ್ತಿ ಪ್ರಧಾನವನ್ನು ಮಾಡಲಾಯಿತು ಕಾರ್ಯಕ್ರಮವನ್ನು ಗವಿಸಿದ್ದೇಶ್ ವಿ ಎಂ ಉಪನ್ಯಾಸಕರು ಹಗರಿಬೊಮ್ಮನಹಳ್ಳಿ ನಿರ್ವಹಿಸಿದರು.

# ಜಾತ್ರಾ ಮಹೋತ್ಸವದ ಭಿತ್ತಿ ಪತ್ರ ಬಿಡುಗಡೆ



**ಬ್ಯಾಡಗಿ:** ಮಾ.1 ರಿಂದ 7 ರವರೆಗೆ ಪಟ್ಟಣದ ಗ್ರಾಮದೇವತೆ ಜಾತ್ರಾ ಮಹೋತ್ಸವ ಏರ್ಪಡಿಸಲಾಗಿದ್ದು, ಉತ್ಸವದಲ್ಲಿ ವಿವಿಧ ಮಠಾಧೀಶರು, ಕಲಾವಿದರು, ಸಾಧಕರು ಆಗಮಿಸುವ ಮೂಲಕ ಶ್ರದ್ದಾ ಭಕ್ತಿಯಿಂದ ಹಮ್ಮಿಕೊಳ್ಳಲಾಗುವುದು ಎಂದು ಮಾಜಿ ಶಾಸಕ ಹಾಗೂ ಜಾತ್ರಾ ಮಹೋತ್ಸವ ಸಮಿತಿಅಧ್ಯಕ್ಷ ಸುರೇಶಗೌಡ ಪಾಟೀಲ ಹೇಳಿದರು.

ಪಟ್ಟಣದ ಗ್ರಾಮದೇವತೆ ದೇವಸ್ಥಾನದ ಆವರಣದಲ್ಲಿ ಭಾನುವಾರ ಜಾತ್ರಾ ಮಹೋತ್ಸವ ಭಿತ್ತಿ ಪತ್ರಗಳನ್ನು ಬಿಡುಗಡೆಗೊಳಿಸಿ ಮಾತ ನಾಡಿದ ಅವರು,5 ವರ್ಷಗಳಿಗೊಮ್ಮೆ ಜರುಗುವ ಜಾತ್ರೆಗೆ ಎಲ್ಲರೂ ಸಹಕಾರ ನೀಡ ಬೇಕು. ಧರ್ಮವಿಧಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿದಲ್ಲಿ ಜಾತ್ರೆ ಯಶಸ್ವಿಯಾಗಲಿದೆ ಎಂದರು.

ಮಾ.1 ರಂದು ಧ್ವಜಾರೋಹಣ, ಮಾ.2 ರಂದು ಶ್ರೀದೇವಿ ಘಟಸ್ಥಾಪನೆ, ಮಾ.3 ಅಂಕಿ ಹಾಕುವುದು ಹಾಗೂ ಉಡಿ ತುಂಬುವುದು, ಮಾ.4 ದೇವಿಯ ಮೆರವಣಿಗೆ, ಮಾ.5 ರಾಣಗೇರ ಕಾರ್ಯಕ್ರಮ, ಮಾ.6 ಗಡಿ ವಿಮೋಚನೆ, ಮಾ.7 ದೇವಿಯ ಮಂದಿರ ಪುರಪ್ರವೇಶ ಕಾರ್ಯಕ್ರಮಗಳು ನಡೆಯಲಿವೆ ಎಂದರು. ರೈತಮುಖಂಡ ಗಂಗಣ್ಣ ಎಲಿ ಮಾತ ನಾಡಿ, ಪಟ್ಟಣದ ಗ್ರಾಮದೇವತೆ ಜಾತ್ರೆಯಲ್ಲಿ ಯಾರೂ ತಮ್ಮ ತಮ್ಮ ಭಾವಚಿತ್ರಗಳು, ಸಂಘ, ಸಂಸ್ಥೆಗಳು ಹಾಗೂ ಇತರೆ ಹೆಸರಿನಲ್ಲಿ ಬ್ಯಾನರ್‌ಗಳನ್ನು ಕಟ್ಟಬಾರದು. ಜಾತ್ರೆಗೆ ಸಂಬಂಧಿಸಿದ ದೇವಿಯ ಬ್ಯಾನರ್‌ಗಳನ್ನು ಕಮೀಟಿ ವತಿಯಿಂದ ಕಟ್ಟಿಸಲಾಗುವುದು.

ಇದಕ್ಕೆ ಎಲ್ಲ ಬ್ಯಾನರ್ ಮುದ್ರಕರು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸಮಿತಿಯ ಪುಟ್ಟಪ್ಪ ಛತ್ರದ, ಪುರಸಭೆ ಸದಸ್ಯರಾದ ಬಸವರಾಜಛತ್ರದ, ರಾಮಣ್ಣ ಕೋಡಿಹಳ್ಳಿ, ವಿನಯ ಹಿರೇಮಠ, ನಾಗರಾಜ ದೇಸೂರ, ಶಂಭು ಮಠದ, ರಮೇಶ ಮೋಟೆಬೆನ್ನೂರ, ಗಣೇಶ ಬೆಳಕಿನಕೊಂಡ, ಕರಬಸಪ್ಪ ಬೆಳಕಿನಕೊಂಡ, ಚಿಕ್ಕಪ್ಪಛತ್ರದ ಇತರರಿದ್ದರು.

# ಗ್ರಾಮದೇವತೆ ಜಾತ್ರಾ ಮಹೋತ್ಸವದಲ್ಲಿ ಫ್ಲೆಕ್ಸ, ಬ್ಯಾನರ್ ಕಟ್ಟಲು ಅವಕಾಶ ಕಲ್ಪಿಸುವಂತೆ ಆಗ್ರಹಿಸಿ ಮನವಿ



**ಬ್ಯಾಡಗಿ:** ಮಾ.1 ರಿಂದ 7 ರವರೆಗೆ ಜರುಗುವ ಪಟ್ಟಣದ ಗ್ರಾಮದೇವತೆ ಜಾತ್ರಾ ಮಹೋತ್ಸವದಲ್ಲಿ ಫ್ಲೆಕ್ಸ, ಬ್ಯಾನರ್‌ಕಟ್ಟಲು ಅವಕಾಶ ಕಲ್ಪಿಸುವಂತೆ ಆಗ್ರಹಿಸಿ ತಾಲೂಕು ಮುದ್ರಣಕಾರರ ಸಂಘದ ಸದಸ್ಯರುಮಾಜಿ ಶಾಸಕ ಹಾಗೂ ಜಾತ್ರಾ ಮಹೋತ್ಸವ ಸಮಿತಿಅಧ್ಯಕ್ಷ ಸುರೇಶಗೌಡ ಪಾಟೀಲಇವರಿಗೆ ಸೋಮವಾರ ಮನವಿ ಪತ್ರ ಸಲ್ಲಿಸಿದರು.

ಈ ವೇಳೆ ಮಾತನಾಡಿದ ತಾಲೂಕು ಮುದ್ರಣಕಾರರ ಸಂಘದ ಅಧ್ಯಕ್ಷ ಗಿರೀಶಸ್ವಾಮಿ ಇಂಡಿಮಠ, ಪಟ್ಟಣದಲ್ಲಿ ಸುಮಾರು ಪಟ್ಟಣದಲ್ಲಿ ಸುಮಾರು 9 ಜನ ಪ್ರಿಂಟಿಂಗ್ ಪ್ರೆಸ್‌ಗಳಿಗೆ ಪುರಸಭೆಯಿಂದ ಅನುಮತಿ ಪಡೆದು ನಿಯಮ ಬದ್ದವಾಗಿ ಮುದ್ರಣ ಸೇರಿದಂತೆ ಬ್ಯಾನರ್‌ಗಳನ್ನು ಮಾಡಿಕೊಡುತ್ತಿದ್ದೇವೆ.

ಪ್ರತಿಯೊಂದು ಪ್ರೆಸ್‌ನ ಮಾಲೀಕರು 10 ರಿಂದ 15 ಲ.ರೂ.ವೆಚ್ಚದಲ್ಲಿ ಆಧುನಿಕ ಶೈಲಿಯ ಬ್ಯಾನರ್ ಯಂತ್ರಗಳನು ವಿವಿದೆಡೆ ಸಾಲ ಮಾಡಿ ಖರೀದಿಸಿ ದ್ದೇವೆ.

ಪ್ರತಿಘಟಕದಲ್ಲಿಯೂ ನಾಲ್ಕಾರು ಜನ ಕಾರ್ಮಿಕರು ಹಾಗೂ ಆ ಕುಟುಂಬಗಳು ಜೀವನ ನಡೆಸುತ್ತಿವೆ. ಈ ಹಿಂದಿ ನಿಂದಲೂ ನಾವು ಜಾತ್ರೆ, ಉತ್ಸವ ಸೇರಿದಂತೆ ವಿವಿಧ ಸಮಾರಂಭಗಳ ಕುರಿತು ಬ್ಯಾನರ್ ಮುದ್ರಿಸಿ ಕಟ್ಟುತ್ತಿದ್ದೇವೆ.

ನಾವು ಸಾಮಾಜಿಕ ವ್ಯವಸ್ಥೆಯಒಂದು ಬಾಗವಾಗಿದ್ದು, ಮುದ್ರಣ ಉದ್ಯೋಗದಲ್ಲಿ ತೊಡಗಿದ್ದೇವೆ.

ಆದರೆ ಗ್ರಾಮದೇವತೆ ಜಾತ್ರಾಉತ್ಸವ ಸಮಿತಿಯವರು ಮಾದ್ಯಮಗಳಲ್ಲಿ ಬ್ಯಾನರ್‌ಕಟ್ಟುವುದಕ್ಕೆ ನಿರ್ಭಂದ ಹೇರಿರುವುದು ಸರಿಯಲ್ಲ.

ಇದರಿಂದ ಇದನ್ನು ನಂಬಿ ಬದುಕುತ್ತಿರುವ ಹಲವಾರು ಕುಟುಂಬಗಳಿಗೆ ತೊಂದರೆಯಾಗಲಿದೆ.

ಆದ್ದರಿಂದ ಜಾತ್ರಾ ಕಮಿಟಿಯವರು ಬ್ಯಾನರ್ ಕಟ್ಟಲು ಅವಕಾಶ ಕಲ್ಪಿಸುವಂತೆ ಮನವಿ ಮಾಡಿದರು.

ಬಳಿಕ ಪುರಸಭೆ ಮುಖ್ಯಾಧಿಕಾರಿ ವಿನಯ ಕುಮಾರ ಹೊಳೆಯಪ್ಪಗೋಳ ಇವರಿಗೆ ಮನವಿ ಪತ್ರ ಸಲ್ಲಿಸಿದರು.

ಈ ವೇಳೆ ಪ್ರಿಂಟಿಂಗ್ ಪ್ರೆಸ್ ಮಾಲೀಕರಾದ ಮಾಲತೇಶಚೊಕ್ಕನಗೌಡ್ರ, ಲೋಹಿತ ಹೆಡಿಯಾಲ, ಬಸವರಾಜಕಬ್ಬೂರು, ಉದಯಚೌದರಿ, ನೂರು ಮುಗದುರು, ಸುಬಾಸ ಪಾಟೀಲ, ಸಚಿನ್ ಪಾಟೀಲ ಇತರರಿದ್ದರು.


# ಗ್ರಾಮೀಣ ಅಂಚೆ ಸೇವಕರ ನೇಮಕಾತಿಗಾಗಿ ಅರ್ಜಿ ಆಹ್ವಾನ

ದಾವಣಗೆರೆ : ಅಂಚೆ ಇಲಾಖೆಯಲ್ಲಿ ಗ್ರಾಮೀಣ ಅಂಚೆ ಸೇವಕರ ನೇಮಕಾತಿ ಸಂಬಂಧ ಇಲಾಖೆಯಲ್ಲಿ ಖಾಲಿ ಇರುವ ಶಾಖಾ ಅಂಚೆ ಪಾಲಕ, ಸಹಾಯಕ ಶಾಖಾ ಅಂಚೆ ಪಾಲಕ ಮತ್ತು ಡಾಕ್ ಸೇವಕ್ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ವೆಬ್‌ಸೈಟ್ www.indiapostgdsonline.g ov.in ನಲ್ಲಿ ಮಾರ್ಚ್ 3 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ಎಲ್ಲಾ ಹುದ್ದೆಗಳಿಗೆ 10ನೇ ತರಗತಿ ತೇರ್ಗಡೆ ಕಡ್ಡಾಯ, ಇಂಗ್ಲೀಷ್ ಮತ್ತು ಗಣಿತದಲ್ಲಿ ಉತ್ತೀರ್ಣ ಅಂಕಗಳೊಂದಿಗೆ 10ನೇ ತರಗತಿಯಲ್ಲಿ, ಕನ್ನಡವನ್ನು ಒಂದು ಭಾಷೆಯಾಗಿ ಅಧ್ಯಯನ ಮಾಡಿರಬೇಕು.

18 ರಿಂದ 40 ವರ್ಷ ವಯೋಮಾನದವರಾಗಿರಬೇಕು. ಹೆಚ್ಚಿನ ಮಾಹಿಗಾಗಿ ಸಮೀಪದ ಯಾವುದೇ ಅಂಚೆ ಕಚೇರಿಯನ್ನು ಅಥವಾ ಮೇಲೆ ತಿಳಿಸಿದ ವೆಬ್‌ಸೈಟ್ ಲಿಂಕ್‌ನ್ನು ಸಂಪರ್ಕಿಸಲು ಅಂಚೆ ಅಧೀಕ್ಷರು ತಿಳಿಸಿದ್ದಾರೆ.

# ಬೆಂಗಳೂರಿನಂಥ ಮಹಾನಗರದಂತೆ ದಾವಣಗೆರೆ ಎಂಸಿಸಿ ಬಿ ಬ್ಲಾಕ್ ಅಭಿವೃದ್ಧಿ: ಮೇಯರ್ ಕೆ. ಚಮನ್ ಸಾಬ್ ಬಣ್ಣನೆ



ದಾವಣಗೆರೆ: ಬೆಂಗಳೂರು ಸೇರಿದಂತೆ ದೊಡ್ಡ ದೊಡ್ಡ ಮಹಾನಗರಗಳ ಹೃದಯಭಾಗದಲ್ಲಿನ ಪ್ರದೇಶದ ಅಭಿವೃದ್ಧಿಯಂತೆ ದಾವಣಗೆರೆ ಮಹಾನಗರ ಪಾಲಿಕೆಯ 38ನೇ ಎಂಸಿಸಿ ಬಿ ಬ್ಲಾಕ್ ಅಭಿವೃದ್ಧಿಪಡಿಸಲಾಗಿದೆ. ಇದೊಂದು ಅತ್ಯುತ್ತಮ ಕಾರ್ಯ ಎಂದು ಮಹಾನಗರ ಪಾಲಿಕೆ ಮೇಯರ್ ಕೆ. ಚಮನ್ ಸಾಬ್ ಬಣ್ಣಿಸಿದರು.

ನಗರದ ಎಂಸಿಸಿ ಬಿ ಬ್ಲಾಕ್ ನಲ್ಲಿ ವಿವಿಧ ಕಾಮಗಾರಿಗಳ ಗುದ್ದಲಿ ಪೂಜೆ ನೆರವೇರಿಸಿದ ಬಳಿಕ ಮಾತನಾಡಿದ ಅವರು, ಇಲ್ಲಿನ ಅಭಿವೃದ್ಧಿ ಮತ್ತು ಸ್ವಚ್ಛತೆ ನೋಡಿದರೆ ಖುಷಿಯಾಗುತ್ತದೆ. ಈ ವಾರ್ಡ್ ನಲ್ಲಿ ಆದಷ್ಟು ಅಭಿವೃದ್ಧಿ ಕಾರ್ಯಗಳು ಬೇರೆ ಆಗಿಲ್ಲ ಎಂದೆನಿಸುತ್ತದೆ. ದೇಶದ ದೊಡ್ಡ ದೊಡ್ಡ ನಗರಗಳಲ್ಲಿ ಆಗಿರುವ ಅಭಿವೃದ್ಧಿಯಂತೆ ಈ ವಾರ್ಡ್ ಬೆಳೆದಿರುವುದು ಎಲ್ಲರಿಗೂ ಮಾದರಿ ಎಂದು ಹೇಳಿದರು.

ಈ ವಾರ್ಡ್ ಪಾಲಿಕೆ ಸದಸ್ಯ ಜಿ. ಎಸ್. ಮಂಜುನಾಥ್ ಗಡಿಗುಡಾಳ್ ಅವರು ಶಕ್ತಿಮೀರಿ ಅನುದಾನ ತಂದು ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಿದ್ದಾರೆ. ಕಳೆದ ಐದು ವರ್ಷಗಳಲ್ಲಿ ಈ ವಾರ್ಡ್ ಗೆ ಕೋಟ್ಯಾಂತರ ರೂಪಾಯಿ ಅನುದಾನ ತಂದು ಅಭಿವೃದ್ಧಿಯ ಮಹಾಪೂರವನ್ನೇ ಹರಿಸಿದ್ದಾರೆ. ಮನೆ ಬಾಗಿಲಿಗೆ ನಿಮ್ಮ ಸೇವಕ ಅಭಿಯಾನ ನಡೆಸಿ ಇತಿಹಾಸ ಬರೆದಿದ್ದಾರೆ. ಇಂಥ ಜನಪ್ರತಿನಿಧಿ ಪಡೆದ ಈ ವಾರ್ಡ್ ನ ಜನರು ಧನ್ಯರು. ಯಾಕೆಂದರೆ ಕೇವಲ ಅಭಿವೃದ್ಧಿ ಮಾತ್ರವಲ್ಲ ಜನರ ಸಮಸ್ಯೆಗಳಿಗೆ ಸ್ಪಂದಿಸಿ ಈಡೇರಿಸುವ ಪ್ರಾಮಾಣಿಕ ಪ್ರಯತ್ನ ನಡೆಸಿದ್ದಾರೆ. ಯಾವಾಗಲೂ ಅಭಿವೃದ್ಧಿ ಪರ ಚಿಂತನೆ ಮಾಡುತ್ತಿದ್ದ ಇಂಥ ಜನಪ್ರತಿನಿಧಿ ಕೈಬಿಡಬೇಡಿ. ಕಳೆದುಕೊಂಡರೆ ಮತ್ತೆ ಸಿಗುವುದಿಲ್ಲ ಎಂದು ಚಮನ್ ಸಾಬ್ ಹೇಳಿದರು.

ಪಾಲಿಕೆ ಸದಸ್ಯ ಜಿ. ಎಸ್. ಮಂಜುನಾಥ್ ಗಡಿಗುಡಾಳ್ ಮಾತನಾಡಿ, ವಾರ್ಡ್ ನಲ್ಲಿ ಇಷ್ಟೊಂದು ಅಭಿವೃದ್ಧಿ ಕಾರ್ಯ ನಡೆಸಲು ಸಾಧ್ಯವಾಗಿದ್ದು ಜನರು ತೋರಿಸಿದ ಪ್ರೀತಿ, ಕೊಟ್ಟ ಧೈರ್ಯವೇ ಕಾರಣ.

ಏನೇ ಸಮಸ್ಯೆಗಳಿದ್ದರೂ ಹೇಳುವ ಜನರು ಅಭಿವೃದ್ಧಿ ಕಾರ್ಯಗಳಿಗೆ ಕೈಜೋಡಿಸಿದ್ದಾರೆ. ಜನರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಕಾಂಗ್ರೆಸ್ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಸಾಕಷ್ಟು ಅನುದಾನ ನೀಡಿದ್ದಾರೆ. ಈ ಅನುದಾನದಲ್ಲಿಯೇ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗಿದೆ ಎಂದು ತಿಳಿಸಿದರು.

ಸ್ವಚ್ಛತೆಯಲ್ಲಿ ಪ್ರಥಮ ಸ್ಥಾನದಲ್ಲಿ ನಮ್ಮ ವಾರ್ಡ್ ಇದೆ ಎಂಬುದೇ ಖುಷಿಯ ವಿಚಾರ. ಯಾಕೆಂದರೆ ಜನರು ಸಹ ಅಷ್ಟೇ ಕಾಳಜಿ ವಹಿಸಿ ವಾರ್ಡ್ ಸ್ವಚ್ಛವಾಗಿಟ್ಟುಕೊಂಡಿದ್ದಾರೆ. ಒಣ ಕಸ, ಹಸಿ ಕಸ ಬೇರ್ಪಡಿಸಿ ನೀಡುವ ಮೂಲಕ ಸಹಕಾರ ನೀಡಿದ್ದಾರೆ. ಐದು ವರ್ಷಗಳ ಅವಧಿಯಲ್ಲಿ ಜನರ ಬಲದಿಂದಾಗಿಯೇ ಇಷ್ಟೊಂದು ಕಾರ್ಯಗಳನ್ನು ಮಾಡಲು ಸಾಧ್ಯವಾಗಿದೆ. ಶಾಮನೂರು ಶಿವಶಂಕರಪ್ಪ, ಎಸ್. ಎಸ್. ಮಲ್ಲಿಕಾರ್ಜುನ್, ಪ್ರಭಾ ಮಲ್ಲಿಕಾರ್ಜುನ್ ಅವರ ಆಶೀರ್ವಾದವೂ ಪ್ರಮುಖ ಅಂಶ ಎಂದು ತಿಳಿಸಿದರು.

ಎಂಸಿಸಿ ಬಿ ಬ್ಲಾಕ್ ನ ಶ್ರೀ ಕಾಸಲ್ ಶ್ರೀನಿವಾಸ್ ಶೆಟ್ಟಿ ಉದ್ಯಾನವನ ಅಭಿವೃದ್ಧಿ ಕಾಮಗಾರಿ ಒಂದು ಕೋಟಿ ರೂಪಾಯಿ, ಶ್ರೀ ಕಾಸಲ್ ಶ್ರೀನಿವಾಸ ಶೆಟ್ಟಿ ಉದ್ಯಾನವನದ ಅಲಂಕಾರಿಕಾ ದೀಪದ ಕಂಬಗಳ ಸ್ಥಾಪನೆ ಕಾಮಗಾರಿಗೆ 40 ಲಕ್ಷ ರೂಪಾಯಿ, 8ನೇ ಮೇನ್ 5ನೇ ಕ್ರಾಸ್ ರಸ್ತೆ ಅಭಿವೃದ್ಧಿ ಕಾಮಗಾರಿ 25 ಲಕ್ಷ ರೂಪಾಯಿ, ಪಾಲಿಕೆಯ ಗಾಂಜಿ ವೀರಪ್ಪ ಈಜುಕೊಳ ಆವರಣದಲ್ಲಿ ಬೇಬಿ ಪೂಲ್ ನಿರ್ಮಾಣ ಕಾಮಗಾರಿಗೆ 25 ಲಕ್ಷ ರೂಪಾಯಿ, 6ನೇ ಮೇನ್ 4ನೇ ಕ್ರಾಸ್ ನಲ್ಲಿರುವ ಮಕ್ಕಳ ಉದ್ಯಾನವನಕ್ಕೆ ಸುಣ್ಣ, ಬಣ್ಣ ಹಾಗೂ 11 ನೇ ಮೇನ್ ಆರನೇ ಕ್ರಾಸ್ ನಲ್ಲಿರುವ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಎದುರಿಗೆ ಇರುವ ಪಾರ್ಕ್ ಅನ್ನು ಅಭಿವೃದ್ಧಿಪಡಿಸಲು 10 ಲಕ್ಷ ರೂಪಾಯಿ ವೆಚ್ಚದ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದು ಮಾಹಿತಿ ನೀಡಿದರು.

ನಗರ ಯೋಜನೆ ಮತ್ತು ಸುಧಾರಣೆ ಸ್ಥಾಯಿ ಸಮಿತಿ ಅಧ್ಯಕ್ಷೆ ಸವಿತಾ ಗಣೇಶ್ ಹುಲ್ಲುಮನೆ, ಆರೋಗ್ಯ, ಶಿಕ್ಷಣ, ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷೆ ಆಶಾ ಉಮೇಶ್, ಲೆಕ್ಕಪತ್ರ ಸ್ಥಾಯಿ ಸಮಿತಿ ಅಧ್ಯಕ್ಷೆ ಸುಧಾ ಮಂಜುನಾಥ ಇಟ್ಟುಗುಡಿ, ನಾಮನಿರ್ದೇಶಿತ ಸದಸ್ಯ ಸುರಭಿ ಶಿವಮೂರ್ತಿ, ತೆರಿಗೆ ಹಾಗೂ ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷೆ ಉರ್ ಬಾನು ಪಂಡಿತ್, ಅಂದನೂರು ಮಂಜಣ್ಣ, ಪರಶುರಾಮಪ್ಪ, ಜಾವೀದ್ ಸಾಬ್, ಜಬ್ಬರ್ ಸಾಬ್, ಕುಶಲ್ ಶೆಟ್ರು, ಕಬ್ಬೂರು ಪ್ರಕಾಶ್, ಬೆಳ್ಳೂಡಿ ವೀರಣ್ಣ, ಮೇಕಾ ಸತ್ಯನಾರಾಯಣ್, ಪ್ರಕಾಶ್, ನಿಂಗನಗೌಡ, ವೀರೇಶ್ ಪಾಟೀಲ್, ರುದ್ರೇಶ್, ದೊಗ್ಗಳ್ಳಿ ಶಿವಕುಮಾರ್, ಹೇಮಂತ್ ಆರಾಧ್ಯ, ರವಿಯಣ್ಣ, ಗುರುಮೂರ್ತಿ, ಮುರುಗೇಶ್ ಮಂತ್ರಿ, ಶೌಕತ್ ಆಲಿ, ವಿಶ್ವನಾಥ್ ಬುಳ್ಳಾಪುರ, ಶ್ರೀಕಾಂತ್, ಮಂಜುನಾಥ್, ಬಿ ಬ್ಲಾಕ್ ನ ಹಿರಿಯ ನಾಗರಿಕರು, ಸಾರ್ವಜನಿಕರು ಹಾಜರಿದ್ದರು.

# ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ಇಂಜಿನಿಯರಿಂಗ್ ಕಾಲೇಜಿನ ಅಧ್ಯಾಪಕರಿಗೆ ಪಿಎಚ್‌ಡಿ ಪದವಿ



ಬಳ್ಳಾರಿ ಫೆ 17. ಬಳ್ಳಾರಿ ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಆರ್‌ವೈಎಂಇಸಿಯ ಮೂವರು ಅಧ್ಯಾಪಕರು ಪಿಹೆಚ್‌ಡಿ ಪದವಿ ಯನ್ನು ಪಡೆದಿದ್ದಾರೆ.

ಡಾ. ಲಿಂಗನಗೌಡ ಆರ್–ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗ, ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ಎಂಜಿನಿಯರಿಂಗ್ ಕಾಲೇಜು, ಬಳ್ಳಾರಿ ಪಿಎಚ್‌ಡಿ ಮಾರ್ಗದರ್ಶಿ: ಡಾ. ಪ್ರದೀಪ್ ಬಿ ಜ್ಯೋತಿ, ವಿಟಿಯು ಆರ್‌ಆರ್‌ಸಿ, ಬೆಳಗಾವಿ.ವಿಶ್ವವಿದ್ಯಾಲಯ : ವಿಶ್ವೇಶ್ವರಯ್ಯ.ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು), ಬೆಳಗಾವಿ.

**ವಿಷಯ : "ಪರ್ಫಾರ್ಮೆನ್ಸ್ ಇಂಪ್ರೂವ್ಮೆಂಟ್ ಇನ್ ಕ್ಯಾಸ್ಕ್ಯಾಡೇಡ್ ಮುಲ್ಟಿಲೆವೆಲ್ ಇನ್ವರ್ಟರ್ ಫೆಡ್ ಓಪನ್ ಎಂಡ್ ವೈಂಡಿಂಗ್ ಇಂಡಕ್ಷನ್ ಮೋಟಾರ್ ಡ್ರೈವ್"**

ಡಾ.ರಾಖೀ ಪಾಟಿಲ್,–ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಷನ್ ಇಂಜಿನಿಯರಿಂಗ್ ವಿಭಾಗ ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ಎಂಜಿನಿಯರಿಂಗ್ ಕಾಲೇಜು, ಬಳ್ಳಾರಿ ಪಿಎಚ್‌ಡಿ ಮಾರ್ಗದರ್ಶಿ: ಡಾ. ಕಲ್ಪನಾ ವಂಜರ್ಖೇಡೆ, ಪಿಡಿಎಸಿಇ, ಕಲಬುರಗಿ

ವಿಶ್ವವಿದ್ಯಾಲಯ : ವಿಶ್ವೇಶ್ವರಯ್ಯ.ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು), ಬೆಳಗಾವಿ. ವಿಷಯ : "ಡಿಸೈನ್ ಅಂಡ್ ಆಪ್ಟಿಮೈಸೇಶನ್ ಸಿಯರ್‌ಪಿನ್ಸ್ಕಿ ಫ್ರ್ಯಾಕ್ಟಲ್ ಆಂಟೆನಾ ಯೂಸಿಂಗ್ ಕಂಪ್ಯೂಟೇಶನಲ್ ಟೆಕ್ನಿಕ್ಸ್ ಫಾರ್ ಮಲ್ಟಿಬ್ಯಾಂಡ್ ಅಪ್ಲಿಕೇಶನ್ಸ್"

ಡಾ. ಪ್ರಶಾಂತ್ ಕೇಣಿ,–ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಷನ್ ಇಂಜಿನಿಯರಿಂಗ್ ವಿಭಾಗ ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ಎಂಜಿನಿಯರಿಂಗ್ ಕಾಲೇಜು, ಬಳ್ಳಾರಿ ಪಿಎಚ್‌ಡಿ ಮಾರ್ಗದರ್ಶಿ: ಡಾ. ರೋಹಿತ ಯುಎಂ ಪ್ರಾಂಶುಪಾಲರು ಪಿಡಿಐಟಿ, ಹಾಸ್ಪೆಟ್, ವಿಶ್ವವಿದ್ಯಾಲಯ : ವಿಶ್ವೇಶ್ವರಯ್ಯ.ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು), ಬೆಳಗಾವಿ.

ಪಿಎಚ್‌ಡಿ ವಿಷಯ : "ಟೆಕ್ನಿಕ್ಸ್ ಫಾರ್ ಡಿಟೆಕ್ಟಿಂಗ್ ದೇ ಸೈಬರ್ ಅಟ್ಯಾಕ್ಸ್ ಆನ್ ಆಟೋಮೊಟಿವ್ ಫಂಕ್ಷನಲ್ ಸೇಫ್ಟಿ ಸಿಸ್ಟಮ್ಸ್ "

ಇವರ ಸಾಧನೆಗೆ ಸ್ಪೂರ್ತಿ ನೀಡಿದ ವಿಭಾಗದ ಮುಖ್ಯಸ್ಥರು ಹಾಗೂ ವಿಭಾಗದ ಪ್ರಧ್ಯಾಪಕರು, ಸಿಬ್ಬಂಧಿವರ್ಗದವರು, ಪ್ರಾಂಶುಪಾಲರು ಡಾ.ಟಿ. ಹನುಮಂತರೆಡ್ಡಿ, ಉಪಪ್ರಾಂಶುಪಾಲರು ಡಾ.ಸವಿತಾ ಸೋನೊಳಿ, ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷರು ಅಲ್ಲಂ ಗುರುಬಸವರಾಜ, ಉಪಾಧ್ಯಕ್ಷರು ಹಾಗೂ ಮಹಾವಿದ್ಯಾಲಯದ ಅಧ್ಯಕ್ಷರು ಜಾನೇಕುಂಟೆ ಬಸವರಾಜ, ಕಾರ್ಯದರ್ಶಿಗಳು ಡಾ. ಅರವಿಂದ್ ಪಟೇಲ್, ಸಹ ಕಾರ್ಯದರ್ಶಿಗಳು ಯಾಳ್ಪಿ ಮೇಟಿ ಪಂಪನಗೌಡ, ಕೋಶಾಧಿಕಾರಿಗಳು ಬೈಲುವದ್ದಿಗೇರಿ ಎರ್ರಿಸ್ವಾಮಿ, ಮಹಾವಿದ್ಯಾಲಯದ ಆಡಳಿತ ಮಂಡಳಿಯ ಸದಸ್ಯರಾದ ಪ್ರಭು ಸ್ವಾಮಿ ಬಿ.ಎಂ, ಮತ್ತು ಬಾಡದ ಪ್ರಕಾಶ್ ಅಭಿನಂದಿಸಿದರು, ಮುಂದೆ ಆರ್.ವೈ.ಎಮ್. ಇ.ಸಿ ಕಾಲೇಜಿಯಲ್ಲಿ ಇತರರು ಹೆಚ್ಚಿನ ಪಿ.ಹೆಚ್.ಡಿ ಪದವಿಗಳು ಸಾಧಿಸಲು ಶುಭಹಾರೈಸಿದರು.

ಹಾಗೂ ಬಳ್ಳಾರಿಯ ಆರ್‌ವೈಎಂಇಸಿಯ ವಿದ್ಯಾರ್ಥಿಗಳು, ಕುಟುಂಬಸ್ಥರು ಹಾಗೂ ಸ್ನೇಹಿತರು ಡಾಕ್ಟರೇಟ್ ಪದವಿಗೆ ಅಭಿನಂದನೆ ಸಲ್ಲಿಸಿದ್ದಾರೆ.

Editor, Printer, Publisher & Owned by : NARAYANA REDDY # 05. Church Road, Marathahalli, Bangalore North, Bangalore-560037 Karnataka. Printed at Sri Venkateshwara Printers & Publishers # 05. Church Road, Marathahalli, Bangalore North, Bangalore-560037
Editor: Narayana Reddy, Mobile : 98450 80478, Email: vaksamaranewspaper@gmail.com